ಅಧ್ಯಕ್ಷರು – ಆಯಿತು

ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ – ಮಾನ್ಯ ಅಧ್ಯಕ್ಷರೆ, ನನ್ನದು ಗಮನ ಸೆಳೆಯುವ ಸೂಚನೆ ಇದೆ

ಅಧ್ಯಕ್ಷರು – ಆಯಿತು

2) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ಕಾವೇರಿ ನ್ಯಾಯಮಂಡಳಿ ತೀರ್ಪಿನ ಬಗ್ಗೆ –

ಶ್ರೀ ವಾಟಾಳ್ ನಾಗರಾಜ್ – ಮಾನ್ಯ ಅಧ್ಯಕ್ಷರೆ, ಫೆಬ್ರವರಿ 5 ನೇ ತಾರೀಖಿನಂದು ಕಾವೇರಿ ನದಿ ನೀರಿನ ವಿಚಾರವಾಗಿ ತೀರ್ಪು ಬಂತು ಇವತ್ತಿಗೆ 50 ದಿವಸಗಳಾಯಿತು ಇಡೀ ರಾಜ್ಯದಲ್ಲಿ ನಾನಾ ರೀತಿಯಲ್ಲಿ ಕಾವೇರಿ ತೀರ್ಪಿನಿಂದ ಅನ್ಯಾಯವಾಗಿದೆಯೆಂದು ಹೇಳಿ, ಇಡೀ ರಾಜ್ಯದ ಉದ್ದಗಲಕ್ಕೂ ಸಮಗ್ರವಾಗಿ ನಾನಾ ಕನ್ನಡ ಸಂಘಸಂಸ್ಥೆಗಳು, ಅಖಿಲ ಕರ್ನಾಟಕ ಗಡಿನಾಡ ಹೋರಾಟ ಸಮಿತಿ ತೀವ್ರವಾದಂಥ ಹೋರಾಟವನ್ನು ಮಾಡಿದೆ ಆ ಹೋರಾಟಗಾರರಿಗೆ ಈ ಸಭೆಯ ಮೂಲಕ ಅಭಿನಂದನೆಯನ್ನು ಸಲ್ಲಿಸುವುದರ ಜೊತೆಗೆ, ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತಿದ್ದೇನೆ, ಈಗ ಸದನದಲ್ಲಿ ಮಾನ್ಯ ಜಲಸಂಪನ್ಮೂಲ ಮಂತ್ರಿಗಳು ಇದ್ದಾರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಇದ್ದಾರೆ, ಮಾನ್ಯ ಮುಖ್ಯಮಂತ್ರಿಯವರು ಈಗ ಸದನದಲ್ಲಿ ಇಲ್ಲ, ಅವರು ಬರಲಿ, ನಮ್ಮದು ಏನೂ ಅಭ್ಯಂತರವಿಲ್ಲ ಸರ್ಕಾರ ಇದುವರೆಗೂ ಏನು ಮಾಡಿದೆ? ಏನು ತೀರ್ಮಾನ ಮಾಡಿದ್ದೀರಿ? ಇಲ್ಲಿ ಒಂದು ನಿರ್ಣಯವಾಯಿತು ಇದು ಆದಮೇಲೆ ಎರಡು ಸರ್ವ ಪಕ್ಷಗಳ ಸಭೆ ಆಯಿತು ಅದು ಆದ ಮೇಲೆ, ಲೋಕಸಭಾ ಸದಸ್ಯರ ಸಭೆ ಆಯಿತು ಇಡೀ ರಾಜ್ಯದ ಜನ ಈ ಕಡೆಗೆ ತಿರುಗಿದರು ಸರ್ಕಾರ ಏನು ಮಾಡಿದೆ? ಸರ್ಕಾರದ ನಿಲುವು ಏನು? ಏನು ಮಾಡಿದ್ದೀರಿ? ಏನಾದರೂ ಒಂದು ವಿಷಯವನ್ನು ರಾಜ್ಯದ ಜನತೆಗೆ ಹೇಳಬೇಕಲ್ಲಾ

ಅಧ್ಯಕ್ಷರು :– ಮಾನ್ಯ ಕೆ ಎಸ್ ಈಶ್ವರಪ್ಪನವರೆ, ಹೇಳಿ

ಶ್ರೀ ಕೆ ಎಸ್ ಈಶ್ವರಪ್ಪ – ಮಾನ್ಯ ಅಧ್ಯಕ್ಷರೆ, ಕಾವೇರಿ ತೀರ್ಪು ಬಂದನಂತರ, ಈಗಾಗಲೇ ಇಡೀ ಕರ್ನಾಟಕ ರಾಜ್ಯಕ್ಕೆ ಗೊತ್ತಿರುವ ರೂಪದಲ್ಲಿ ಮೊದಲನೆಯದಾಗಿ ನಾವು ಒಂದು ಸರ್ವ ಪಕ್ಷಗಳ ಸಭೆಯನ್ನು ಕರೆದಿದ್ದೆವು ಆ ಸಭೆಯಲ್ಲಿ ಸರ್ವ ಪಕ್ಷಗಳ ಅಭಿಪ್ರಾಯದಂತೆ ತೀರ್ಪಿನ ಕಾಪಿಯನ್ನು ಕೊಡಬೇಕು ಅದನ್ನೆಲ್ಲಾ ನಾವು ಓದಿಕೊಂಡು ಬರಬೇಕು ಅದು ಆದನಂತರ ನಮ್ಮ ಅಭಿಪ್ರಾಯಗಳನ್ನು ತಿಳಿಸುತ್ತೇವೆಂದು ಹೇಳಿದ ನಂತರ, ಸುಮಾರು 2,000 ಕಾಪಿಗಳನ್ನು ಮಾಡಿಸಿ, ಎಲ್ಲರಿಗೂ ಹಂಚಲಾಯಿತು ಅದು ಆದನಂತರ ವಿಶೇಷವಾಗಿ ಇನ್ನೊಂದು ಸಭೆಯನ್ನು ಕರೆದೆವು ಆ ಸಭೆಯಲ್ಲಿ ತುಂಬಾ ಸ್ಪಷ್ಟವಾದ ಅಭಿಪ್ರಾಯ ಬಂದಿದ್ದು ಏನೆಂದರೆ, ಕಾನೂನು ಪಂಡಿತರು ಇದರ ಬಗ್ಗೆ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಇದ್ದಾರೆ, ಆ ದಿಕ್ಕಿನಲ್ಲಿಯೇ ಸರ್ಕಾರ ಹೋಗಬೇಕಾಗುತ್ತದೆಂಬ ಅಂಶವನ್ನು ತಿಳಿಸಿದ ಪ್ರಕಾರವೇ, ಕಾನೂನು ಪಂಡಿತರಿಗೆ ತುಂಬಾ ಸ್ಪಷ್ಟವಾದ ಏನು ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಅಂಶವನ್ನು ತಿಳಿಸಿದ್ದೇವೆ ಈಗಾಗಲೇ ಮೊನ್ನೆ ಕೂಡ ನಾರಿಮನ್‌ರವರ ನೇತೃತ್ವದಲ್ಲಿ ಒಂದು ವಿಶೇಷವಾದ ಸಭೆ ಕೂಡ ಆಗಿದೆ ನಮ್ಮ ನೀರಾವರಿ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ಕೂಡ ದೆಹಲಿಯಲ್ಲಿ ಆ ಸಭೆಯಲ್ಲಿ ಪಾಲ್ಗೊಂಡು ಬಂದಿದ್ದಾರೆ ಆದಷ್ಟು ಬೇಗ, ಇದರ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲೂ ಕೂಡ ನಮ್ಮ ಕಡೆಯಿಂದ ಕೇಸ್ ಹಾಕಬೇಕೆಂಬ ತೀರ್ಮಾನವನ್ನು ಈಗಾಗಲೇ ತೆಗೆದುಕೊಂಡಿದ್ದಾರೆ ಸುಪ್ರೀಂಕೋರ್ಟ್‌ನಲ್ಲಿ ರಾಜ್ಯದ ಪರ ವಾದ ಮಾಡುವ ದಿಕ್ಕಿನಲ್ಲಿ ನಾವು ಎಲ್ಲಾ ಪ್ರಯತ್ನಗಳನ್ನು ಯೋಚನೆ ಮಾಡಿ, ಯಾವ್ಯಾವ ವಿಚಾರಗಳಲ್ಲಿ ನಮಗೆ ಅನ್ಯಾಯವಾಗಬೇಕಾಗಿದೆ ಅಂತಿಮ ತೀರ್ಪಿನಿಂದ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿರುವಂತಹ ಅಂಶಗಳು ಏನು ಎಂಬುದೆಲ್ಲವನ್ನು ಕೂಡ ಈಗಾಗಲೇ ಒಂದು ರೂಪಕ್ಕೆ ತಂದಿದ್ದಾರೆಂಬ ಅಂಶವನ್ನು ಕೂಡ ಈ ಸದನಕ್ಕೆ ಹೇಳಲಿಚ್ಛಿಸುತ್ತೇನೆ ಹಾಗಾಗಿ ಸುಪ್ರೀಂ ಕೋರ್ಟಿನಲ್ಲಿ ಕರ್ನಾಟಕ ರಾಜ್ಯದ ಪರವಾಗಿ ನಾವು ಕೇಸನ್ನು ಹಾಕುವವರಿದ್ದೇವೆ ಇದರ ಜೊತೆಗೆ ಇನ್ನೊಂದು ಅಂಶ ಮಾನ್ಯ ವಾಟಾಳ್ ನಾಗರಾಜ್‌ರವರ ಜೊತೆಗೆ ಇಡೀ ಕರ್ನಾಟಕ ರಾಜ್ಯ ಈ ವಿಚಾರದಲ್ಲಿ ಒಂದು, ಎನ್ನುವ ಅಂಶವನ್ನು ಈಗಾಗಲೇ ತೋರಿಸಿಕೊಟ್ಟಿದ್ದೇವೆ

ಈ ಸದನದಲ್ಲೂ ಕೂಡ ಒಂದೇ ನಿರ್ಣಯವನ್ನು ಮಂಡನೆ ಮಾಡಿ, ಅದನ್ನು ಅನುಮೋದಿಸಿ, ಇಡೀ ಕರ್ನಾಟಕ ರಾಜ್ಯ ಒಟ್ಟಾಗಿದೆಯೆನ್ನುವ ಅಂಶವನ್ನು ಈ ಸದನದ ಮುಖಾಂತರವೂ ತೋರಿಸಿದ್ದೇವೆ ಲೋಕಸಭೆಯಲ್ಲೂ ಕೂಡ ಎಲ್ಲಾ ಪಕ್ಷದ ಸಂಸತ್ ಸದಸ್ಯರು ಒಗ್ಗಟ್ಟಾಗಿ, ಯಾವ ಅಂಶವನ್ನು ಕೇಂದ್ರ ಸರ್ಕಾರದ ಮುಂದೆ, ಮಾನ್ಯ ಪ್ರಧಾನಮಂತ್ರಿಗಳ ಮುಂದೆ, ತರಬೇಕೆಂಬ ಪ್ರಯತ್ನವನ್ನು ಏನು ಮಾಡಬೇಕಾಗಿದೆ ಆ ದಿಕ್ಕಿನಲ್ಲೂ ಕೂಡ ಸಾಕಷ್ಟು ಕೆಲಸಗಳನ್ನು ಅವರೂ ಕೂಡ ಮಾಡುತ್ತಿದ್ದಾರೆ ಹೀಗಾಗಿ ಕಾವೇರಿ ತೀರ್ಪಿನಿಂದ ಕರ್ನಾಟಕ ರಾಜ್ಯಕ್ಕೆ ನಿಜವಾಗಿ ಅನ್ಯಾಯವಾಗಿದೆ ಆ ಬಗ್ಗೆ ಎರಡು ಮಾತಿಲ್ಲ ಆದರೆ ರಾಜ್ಯ ಸರ್ಕಾರ ಏನೇನು ಪ್ರಯತ್ನಗಳನ್ನು ಮಾಡಬೇಕೋ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆಂಬ ಅಂಶವನ್ನು ಈ ಸದನದ ಮುಖಾಂತರ ತಿಳಿಸಲಿಚ್ಛಿಸುತ್ತೇನೆ

ಅಧ್ಯಕ್ಷರು :– ಆಯಿತು

ಶ್ರೀ ವಾಟಾಳ್ ನಾಗರಾಜ್ – ವಿರೋಧ ಪಕ್ಷಗಳ ಸದಸ್ಯರುಗಳನ್ನು ಕರೆದುಕೊಂಡು ಹೋಗಿಲ್ಲ

ಅಧ್ಯಕ್ಷರು – ನೀವು mention ಮಾಡಬೇಕೆಂದು ಹೇಳುತ್ತೀರಿ ಅದರ ಮೇಲೆ ಚರ್ಚೆಯನ್ನು ಆರಂಭ ಮಾಡುತ್ತೀರಿ, ಏನು ಇದು?

ಶ್ರೀ ಎನ್ ಧರ್ಮಸಿಂಗ್ – ಮಾನ್ಯ ಅಧ್ಯಕ್ಷರೆ, ಈಗ Zero Hour ನಲ್ಲಿ ಮಾನ್ಯ ವಾಟಾಳ್ ನಾಗರಾಜುರವರಿಗೆ ವಿಷಯ ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ ಇದು ರಾಜ್ಯದ ಗೌರವದ ಪ್ರಶ್ನೆ ರಾಜ್ಯಕ್ಕೆ ನ್ಯಾಯ ಸಿಗತಕ್ಕಂಥ ಪ್ರಶ್ನೆ ಇದರ ಬಗ್ಗೆ ಶ್ರೀ ವಾಟಾಳ್ ನಾಗರಾಜ್‌ರವರ ನೇತೃತ್ವದಲ್ಲಿ ಇಡೀ ನಮ್ಮ ರಾಜ್ಯದಲ್ಲಿ ಮತ್ತು ದೆಹಲಿಯಲ್ಲಿ ಕೂಡ ಹೋಗಿ ಪ್ರತಿಭಟನೆಯನ್ನು ಮಾಡಿದ್ದಾರೆ ಎಲ್ಲರೂ ಮಾನ್ಯ ಜಿ ವಿ ಶ್ರೀರಾಮರೆಡ್ಡಿಯವರು ಇದ್ದಾರೆ, ಶ್ರೀ ಕೆ ಜಯಪ್ರಕಾಶ್ ಹೆಗ್ಡೆಯವರು ಇದ್ದಾರೆ, ನಾವು ಕೂಡ ಸಂಪೂರ್ಣವಾದ ಬೆಂಬಲವನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಕೊಟ್ಟಿದ್ದೇವೆ ಮುಖ್ಯಮಂತ್ರಿಯವರು ಎರಡು ಮೂರು ವಿಷಯದಲ್ಲಿ ಎಡವಿದ್ದಾರೆ ನಾನು ನಾಳೆ ಪ್ರಧಾನ ಮಂತ್ರಿಯವರ ಬಳಿ ಹೋಗುತ್ತೇನೆ,

ಚರ್ಚೆ ಮಾಡುತ್ತೇನೆಂದು ಹೇಳಿದರು ಅವರು ಹೋಗುವುದಕ್ಕಿಂತ ಮುಂಚೆ ನಮ್ಮನ್ನು ಕೇಳಬೇಕೆಂದು ಈಗ ಹೇಳುತ್ತಾರೆ ನ್ಯಾಯಕ್ಕೆ ಎಂದು ಜನ ಯಾರು ಇದ್ದಾರೆ, ಅವರು legal experts ಕೂಡ ತಮ್ಮದೇ ಆದ ರೀತಿಯಲ್ಲಿ ಸ್ಪಂದಿಸಿದರು ಮೊನ್ನೆ ಯುಗಾದಿ ಹಬ್ಬಕ್ಕೆ ಶುಭಾಶಯವನ್ನು ಕೋರುವ ರೀತಿಯಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಯವರು ನಾನು ಕರುಣಾನಿಧಿಯವರೊಂದಿಗೆ ಮಾತನಾಡಿದ್ದೇನೆ ಅವರೊಂದಿಗೆ ಮಾತುಕತೆ ಮಾಡುತ್ತೇನೆ, ಮಾತುಕತೆ ಮುಖಾಂತರ ಈ ಒಂದು ಸಮಸ್ಯೆಯನ್ನು ಬಗೆಹರಿಸುತ್ತೇನೆಂಬ ಮಾತನ್ನು ಹೇಳಿದರು ಇವತ್ತು ಏನಾಗಿದೆಯೆಂದರೆ, ಮಾನ್ಯ ಕರುಣಾನಿಧಿಯವರು ಇದನ್ನು ರಿಜೆಕ್ಟ್ ಮಾಡಿದ್ದಾರೆ ನಾನು ಯಾವ ಹಂತದಲ್ಲೂ ಕೂಡ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯೊಡನೆ ಮಾತನಾಡುವುದಕ್ಕೆ ಸಿದ್ಧನಾಗಿಲ್ಲವೆಂದು ಹೇಳಿದ್ದಾರೆ ಇವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ ಇವತ್ತು ಎಲ್ಲಾ ರೀತಿಯ ಸಂಪೂರ್ಣವಾದ ಬೆಂಬಲವನ್ನು ಮುಖ್ಯಮಂತ್ರಿಗಳಿಗೆ ಕೊಟ್ಟಾಗ ಮುಖ್ಯಮಂತ್ರಿಯವರು ಈ ರೀತಿಯಾಗಿ ಹಗುರವಾಗಿ ಏಕೆ ಮಾತಾಡಬೇಕು? ಇವರು ಮಾನ್ಯ ಕರುಣಾನಿಧಿಗೆ ಯುಗಾದಿ ಹಬ್ಬದ ಶುಭಾಶಯವನ್ನು ಹೇಳಬೇಕು ಅವರು ಬೇಕಾದರೆ ಹೇಳಲಿ, ಆದರೆ ಅವರು ನಾವು ಏನೂ ಮಾತನಾಡಿಲ್ಲ ಮಾತುಕತೆಗೆ ಸಿದ್ಧವಿಲ್ಲವೆಂಬ ಮಾತನ್ನು ಹೇಳಿದ್ದಾರೆ ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಅದರ ಬಗ್ಗೆ ಕೂಡ ಸ್ಪಷ್ಟೀಕರಣ ಕೊಡಬೇಕು ಇದು ರಾಜ್ಯಕ್ಕೆ ಆದಂತಹ ಅಗೌರವ, ಇವತ್ತು ಇಷ್ಟು ಪ್ರತಿಭಟನೆ ಮಾಡುವಂತಹ ತಮ್ಮ ಜಿಲ್ಲೆಯಲ್ಲಿ, ಈ ಒಂದು ವಿಷಯದಲ್ಲಿ ವಿಶೇಷವಾಗಿ ಒಂದಾಗಿ ಕೆಲಸ ಮಾಡುವಂಥ ಕಾಲದಲ್ಲಿ ಮುಖ್ಯಮಂತ್ರಿಯವರು ಕರ್ನಾಟಕ ರಾಜ್ಯದ ಜನರ ವಿಶ್ವಾಸವನ್ನು ತೆಗೆದುಕೊಂಡು ಮಾತನಾಡುವಂಥಾದ್ದನ್ನು ಕಲಿಯಬೇಕು ಅಲ್ಲಿ ಇವತ್ತು ಮಾನ್ಯ ಕರುಣಾನಿಧಿಯವರು ದಬಾಕೆ ಹೊಡೆದಿದ್ದಾರೆ, ಇವತ್ತು ಅಗೌರವವಾಗಿದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ – ಮಾನ್ಯ ಅಧ್ಯಕ್ಷರೇ, ಅದಕ್ಕೆ ನಾನು ಬೇಡವೆಂದು ಹೇಳಿದ್ದು, ಇದು ಎಲ್ಲೆಲ್ಲಿಗೊ ಬೆಳೆದುಕೊಂಡು ಹೋಗುತ್ತದೆ ಅವರು ಅವರ ಸ್ಥಾನ ಮತ್ತು ಅವರ ಹಿರಿತನವನ್ನು ಗಮನಿಸಿ, ಬಹಳ ನಿಗ್ರಹದಲ್ಲಿದ್ದು

ಮಾತನಾಡುತ್ತಿದ್ದಾರೆ ಮಾನ್ಯ ಕರುಣಾನಿಧಿಯವರು ಮುಖ್ಯಮಂತ್ರಿಯವರ ಮಾತಿಗೆ ಏನು ಹೇಳಿದ್ದಾರೆ? ನಾನು ಆ ಸುದ್ದಿಯನ್ನೇ ಮಾತನಾಡಿಲ್ಲವೆಂದು ಹೇಳಿದ್ದಾರೆ ಎಂದರೆ Chief Minister ರವರು ಹೇಳಿದ್ದು virtually ಸುಳ್ಳು, ಅಪ್ಪಟ ಸುಳ್ಳು ಎಂದು ಹೇಳಿದ್ದಾರೆ ನಾವು ಅವರನ್ನು ಸುಳ್ಳುಗಾರ ಎಂದು ಹೇಳಿ ಕರೆಯುವುದು ಚೆನ್ನಾಗಿರುವುದಿಲ್ಲ He is leader of the house ಇದರ ಅರ್ಥ ಏನು? ಮಾನ್ಯ ಕರುಣಾನಿಧಿಯವರು ಕೊಟ್ಟಿರುವಂಥ ಪ್ರತಿಕ್ರಿಯೆಯ ಅರ್ಥವೇನು? ನಾವು ಏನಾಗಬೇಕು? ಈ ಸದನ ಏನಾಗಬೇಕು? ಈ ರಾಜ್ಯವೇನಾಗಬೇಕು? ರಾಜ್ಯದ ಮುಖ್ಯಮಂತ್ರಿಯನ್ನು ಆ ರೀತಿ ಪಕ್ಕದ ರಾಜ್ಯದ ಮುಖ್ಯಮಂತ್ರಿಗಳು ವರ್ಣಿಸಿದಾಗ ನಮ್ಮ ಗತಿ ಏನಾಗಬೇಕು? ನಮಗೇನಾದರೂ ಮೂರು ಕಾಸಿನ ಮಾನ ಮರ್ಯಾದೆ ಇದೆಯೇ? ಗೌರವವಿದೆಯೇ? ಸ್ವಾಭಿಮಾನವಿದೆಯೇ?

ಅಧ್ಯಕ್ಷರು – ಈಗ ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಬಂದು ಉತ್ತರವನ್ನು ಹೇಳುತ್ತಾರೆ

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು) – ಮಾನ್ಯ ಹಿರಿಯ ಸದಸ್ಯರು ಮಾತನಾಡುವಾಗ ಸ್ವಲ್ಪ ಸಂಯಮವಾಗಿ ಮಾತನಾಡುವುದಕ್ಕೆ ಹೇಳಿ ಇವರೆಲ್ಲ ಬಹಳ

(ಗೊಂದಲ)

(ಅನೇಕ ಮಾನ್ಯ ಸದಸ್ಯರು ಒಟ್ಟಾಗಿ ಎದ್ದು ನಿಂತು ಮಾತನಾಡುತ್ತಿದ್ದರು)

ಶ್ರೀ ಕೆ ಆರ್ ರಮೇಶ್‌ಕುಮಾರ್ – ಕುಳಿತುಕೊಳ್ಳಿ ಕೂಗಾಟ ಮಾಡಬೇಡಿ ದಯಮಾಡಿ ಚರ್ಚೆಯಲ್ಲಿ ಭಾಗವಹಿಸಿ

(ಗೊಂದಲ)

ಅಧ್ಯಕ್ಷರು – ಏನು ಹೇಳಿದ್ದಾರೆನ್ನುವುದನ್ನು ಮಂತ್ರಿಗಳು ಬಂದ ಮೇಲೆ ಅದನ್ನು ಪ್ರಸ್ತಾಪ ಮಾಡೋಣ He is the right man

(ಗೊಂದಲ)

ಶ್ರೀ ಎನ್ ಚೆಲುವರಾಯಸ್ವಾಮಿ – ಇಲ್ಲವೆಂದರೆ ಕಾನೂನುಬದ್ಧವಾಗಿ ಹೋರಾಟ ಮಾಡುತ್ತೇವೆ

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು – ತಮಿಳುನಾಡು ಪರವಾಗಿ ಚರ್ಚೆ ಮಾಡುವುದಕ್ಕೆ ನೀವು ಬಂದಿದ್ದೀರಾ?

ಶ್ರೀ ಕೆ ಆರ್ ರಮೇಶ್‌ಕುಮಾರ್ – ಹೌದಪ್ಪ, ನಾನು ತಮಿಳುನಾಡಿನಿಂದ ಬಂದಿದ್ದೇನೆ ನೀವು ಇಲ್ಲೇ ಹುಟ್ಟಿ ಬೆಳೆದಿದ್ದೀರಿ ಆಯಿತು, ನಿನ್ನಷ್ಟು ಅಪ್ಪಟ ಕನ್ನಡಿಗ ನಾನಲ್ಲಪ್ಪ ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಕರುಣಾನಿಧಿಯವರು ಕೊಟ್ಟಿರತಕ್ಕಂಥ ಉತ್ತರ ನಮ್ಮನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಿದೆ ಸಭಾನಾಯಕರನ್ನು ಈ ರೀತಿ ಹಗುರವಾಗಿ ತೋರಿಸಿದೆ ಇದು ನಮಗೆಲ್ಲಾ ಆದಂಥ ಅಗೌರವ ಅದಕ್ಕೆ ಅವರು ಉತ್ತರ ಕೊಟ್ಟಿಲ್ಲ ಮಾತು ಬೆಳೆದುಕೊಂಡು ಹೋಗುತ್ತದೆಂದರೆ ಬಾಯಿಗೆ ಬಂದಿದ್ದೆಲ್ಲ ಮಾತನಾಡುತ್ತಾರೆ

(ಗೊಂದಲ)

ಶ್ರೀ ಎನ್ ಚೆಲುವರಾಯಸ್ವಾಮಿ – ಅವರು ಆ ಪದವನ್ನು ಉಪಯೋಗಿಸಿದ್ದರೆ ನಾವು ಯಾರೂ ಖಂಡಿತ ಆ ತರಹ ಮಾತನಾಡುತ್ತಿರಲಿಲ್ಲ

(ಗೊಂದಲ)

ಅಧ್ಯಕ್ಷರು – ಸರ್ಕಾರದ ಪರವಾಗಿ ಏನು ಹೇಳುತ್ತೀರಿ? (ಗೊಂದಲ) ದಯಮಾಡಿ ತಾವೆಲ್ಲ ಕುಳಿತುಕೊಳ್ಳಿ (ಗೊಂದಲ) ಈಗ ಉಪಮುಖ್ಯಮಂತ್ರಿಗಳಿದ್ದಾರೆ ಅವರೇನು ಹೇಳುತ್ತಾರೆ, ಹೇಳಲಿ (ಗೊಂದಲ) ಅವರು ಬರಲಿ (ಗೊಂದಲ) ಆಯಿತು ಬಿಡಿ (ಗೊಂದಲ)

ಶ್ರೀ ಕೆ ಆರ್ ರಮೇಶ್‌ಕುಮಾರ್ :– ಯಾರಿಗಾದರೂ ನಾನು ಸರ್ಟಿಫಿಕೇಟ್ ಕೊಡುವುದಕ್ಕೆ ಇಲ್ಲಿ ಬಂದಿಲ್ಲ ಯಾರಿಗೆಂದರೆ ಅವರಿಗೆ ಸರ್ಟಿಫಿಕೇಟ್ ಕೊಡುವುದಕ್ಕೆ ನಾನು ಬಂದಿಲ್ಲ ಅದಲ್ಲ ನನ್ನ ಉದ್ಯೋಗ ನನ್ನ ಉದ್ಯೋಗ ನನಗೆ ಗೊತ್ತಿದೆ

ಅಧ್ಯಕ್ಷರು – ಆಯಿತು, ರಮೇಶ್‌ಕುಮಾರ್‌ರವರೆ (ಗೊಂದಲ) ಎಲ್ಲರೂ ಕುಳಿತುಕೊಳ್ಳಿ ಉಪ ಮುಖ್ಯಮಂತ್ರಿಗಳೇನೋ ಮಾತನಾಡುತ್ತಾರೆ

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು – ನೀವು ಯಾರಿಗೆ ಹೆದರಿಸುತ್ತೀರಿ (ಗೊಂದಲ) ಮಾತನಾಡಿ ನೋಡೋಣ ಅದೇನು ಮಾತನಾಡುತ್ತೀರೋ ಮಾತನಾಡಿ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ – ಸಭಾಧ್ಯಕ್ಷರಾಗಿ ಕೆಲಸ ಮಾಡಿದಂಥ, ಸಾಕಷ್ಟು ಅನುಭವವಿರುವಂಥ, ಹಿರಿಯ ನಾಯಕರಾದಂಥ ಮಾನ್ಯ ರಮೇಶ್‌ಕುಮಾರ್‌ರವರ ಬಾಯಿಯಿಂದ ಏಕೆ ಈ ಮಾತುಗಳು ಬರುತ್ತಿವೆಯೋ ನನಗರ್ಥವಾಗುತ್ತಿಲ್ಲ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ನಾವು ಆವೇಶದಲ್ಲಿ ನಮ್ಮ ಮುಖ್ಯಮಂತ್ರಿಗಳನ್ನು, ನಮ್ಮ ನಾಯಕರನ್ನು ಏನು ಹೇಳಿದರು, ಏನು ನಡೆಯಿತು ಎನ್ನುವುದು ಗೊತ್ತಿಲ್ಲದೇ ಅವಹೇಳನಕಾರವಾದ ರೀತಿಯಲ್ಲಿ ನಾವೇ ಈ ಮನೆಯಲ್ಲಿ ಮಾತನಾಡಿದರೆ ಅಲ್ಲಿ ನಮ್ಮ ರಾಜ್ಯದ ಚಟುವಟಿಕೆಗಳ ಬಗ್ಗೆ, ಕಾವೇರಿ ವಿಷಯದಲ್ಲಿ ಮಾಡುತ್ತಿರುವ ಮಾತುಕತೆಗಳ ಬಗ್ಗೆ ಪಕ್ಕದ ತಮಿಳುನಾಡಿನಲ್ಲಿರುವಂಥ ಜನ ಅಲ್ಲಿನ ಮುಖ್ಯಮಂತ್ರಿ ಏನು ಭಾವಿಸಬಹುದು ಎನ್ನುವಂಥದ್ದನ್ನು ಸ್ವಲ್ಪ ಎಚ್ಚರಿಕೆಯಿಂದ ನಾವು ಮಾತುಕತೆ ಆಡಬೇಕಾಗುತ್ತದೆ ಇಲ್ಲಿ ಏನಾಗಿದೆ ಎಂದರೆ, ನಮ್ಮ ಮುಖ್ಯಮಂತ್ರಿಗಳು ಸದ್ಭಾವನೆಯಿಂದ ತಮಿಳುನಾಡಿನ ಮುಖ್ಯಮಂತ್ರಿಗಳ ಜೊತೆಗೆ ಮಾತುಕತೆ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಮಾತನಾಡಿದರು ಇದು ಕೇವಲ ನಮ್ಮ ಮುಖ್ಯಮಂತ್ರಿಗಳು ಹೇಳಿರುವ ಮಾತಲ್ಲ ಈ ದೇಶದ ಪ್ರಧಾನ ಮಂತ್ರಿಗಳು ಹೇಳಿರುವಂಥ ಮಾತು ಇಂಥ ನದಿ ನೀರಿನ ವಿವಾದ ಬಂದಾಗ ಮಾತುಕತೆ ಮೂಲಕ ಬಗೆಹರಿಸಿಕೊಂಡಾಗ ಮಾತ್ರ ಎರಡೂ ರಾಜ್ಯಗಳ ಸಂಬಂಧಗಳು ಉಳಿಯುತ್ತವೆ ಯಾವುದೋ ಕೋರ್ಟ್‌ಗಳು ಇದನ್ನು ತೀರ್ಮಾನ ಮಾಡುವುದಕ್ಕಾಗುವುದಿಲ್ಲ ಈ ಮಾತು ಕಳೆದ ಹತ್ತಾರು ವರ್ಷಗಳಿಂದ ಚರ್ಚೆಯಾಗುತ್ತಿದೆ ಸ್ವತಃ ಪ್ರಧಾನಿಯವರು ಇತ್ತೀಚೆಗೆ ಹೇಳಿರುವ

ಅಭಿಪ್ರಾಯ ತಮಿಳುನಾಡಿನ ಜನ ಇಲ್ಲಿ ವಾಸ ಮಾಡುತ್ತಾರೆ ಕನ್ನಡಿಗರು ಅಲ್ಲಿ ವಾಸ ಮಾಡುತ್ತಾರೆ ನೀರು ಬೆಂಕಿಯನ್ನು ಆರಿಸುವುದಕ್ಕೆ ಉಪಯೋಗಬೇಕೇ ಹೊರತು ಬೆಂಕಿ ಹಂಚುವುದಕ್ಕೆ ಉಪಯೋಗವಾಗಬಾರದೆಂದು ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಒಂದು ಸಾರಿ ಹೇಳಿದ್ದರು ಈ ಹಿನ್ನೆಲೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಕರುಣಾನಿಧಿಯವರ ಜೊತೆ ದೂರವಾಣಿ ಮೂಲಕ ಸಂಪರ್ಕ ಮಾಡಿ ಮಾತುಕತೆ ಮೂಲಕ ಬಗೆಹರಿಸಿಕೊಳ್ಳೋಣವೆಂದು ಸಲಹೆ ಕೊಟ್ಟಿರಬಹುದು ಆ ರಾಜ್ಯದ ಹಿತದೃಷ್ಟಿಯಿಂದ ಅಲ್ಲಿಯ political situation ಹಿನ್ನೆಲೆಯಲ್ಲಿ ಅಲ್ಲಿರುವಂಥ ಮುಖ್ಯಮಂತ್ರಿ ಏನೋ ಹಗುರವಾಗಿ ಮಾತನಾಡಿದರು ಮಾತನಾಡಿದರೆ, ಒಬ್ಬ ಮುಖ್ಯಮಂತ್ರಿಯಾಗಿ ಇನ್ನೊಂದು ರಾಜ್ಯದ ಮುಖ್ಯಮಂತ್ರಿ ಸಲಹೆ ಕೊಟ್ಟಾಗ ಯಾವ ಚೌಕಟ್ಟಿನಲ್ಲಿ ಮಾತನಾಡಬೇಕು, ಬಿಡಬೇಕು ಎಂಬುದು ಆ ಮುಖ್ಯಮಂತ್ರಿಯವರಿಗೆ ಬಿಟ್ಟಂಥದ್ದು ಆದರೆ, ನಮ್ಮ ಮುಖ್ಯಮಂತ್ರಿಗಳ ತಪ್ಪೇನಿದೆ? ಇಡೀ ಪ್ರತಿ ಪಕ್ಷದ ನಾಯಕರ ಸಭೆಯನ್ನು ಕರೆದಂಥ ಕಾಲದಲ್ಲಿಯೂ ಸಹ ಮಾತುಕತೆಯ ಮೂಲಕವೇ ಇದು ಬಗೆಹರಿಯಬೇಕು, ಇದನ್ನು tribunal ತೀರ್ಮಾನ ಮಾಡುವುದಕ್ಕಾಗುವುದಿಲ್ಲ ಎಂದೇ ಚರ್ಚೆಯಾಗಿದೆ ಇವತ್ತು ಇಡೀ ನಮ್ಮ ಕಾವೇರಿ ಬೇಸಿನ್‌ನಲ್ಲಿರುವಂಥ ನದಿಗಳು ಒಣಗಿ, ಕುಡಿಯುವ ನೀರಿನ ಹಾಹಾಕಾರ ಇರುವಂಥ ಸಂದರ್ಭದಲ್ಲಿ ಯಾರು ಬಂದು ನೀರನ್ನು ಬಿಡಿಸುತ್ತಾರೆ ? ಎಲ್ಲಿಂದ ನೀರು ಬಿಡಬೇಕು? ಇಂಥ ಒಂದು ಸಂದರ್ಭದಲ್ಲಿ ಮಾತುಕತೆ ಮೂಲಕ ಇದಕ್ಕೊಂದು ಪರಿಹಾರ ಹುಡಕೋಣ ಅನ್ನುವಂಥ ಭಾವನೆಯಿಂದ ನಮ್ಮ ಮುಖ್ಯಮಂತ್ರಿಗಳು ಅವರ ಜೊತೆ ಮಾತನಾಡಿದರು ಇಲ್ಲ, ಮಾತನಾಡಿಲ್ಲವೆಂದು ಅವರು ಹೇಳುವುದಾದರೆ, ಅದಕ್ಕೆ ನಮ್ಮ ಮುಖ್ಯಮಂತ್ರಿಗಳು ಜವಾಬ್ದಾರಿಯೇ? ಅದು ಅವರ ನಡುವಳಿಕೆ ತೋರಿಸುತ್ತದೆ ಉದಾಹರಣೆಗೆ, ಮಹಾರಾಷ್ಟ್ರದ ಮುಖ್ಯಮಂತ್ರಿಯವರಿಗೇನು ಸಂಬಂಧ? ಬೆಳಗಾಂನಲ್ಲಿ ನಾವು ವಿಧಾನಸೌಧ ಕಟ್ಟಿಸುವುದಕ್ಕೂ, ಅವರು ಬೇಡವೆನ್ನುವದಕ್ಕೂ ಅವರಿಗೇನು ಸಂಬಂಧ? ನಾನು ಸುಪ್ರೀಂಕೋರ್ಟ್ ಮುಂದೆ ಹೋಗುತ್ತೇನೆ, ಕೋರ್ಟ್ ಮುಂದೆ ಹೋಗುತ್ತೇನೆ ಎಂದು ಹೇಳುತ್ತಾರೆ (ಗೊಂದಲ) ನಾನು ಮಾತನಾಡುವುದಕ್ಕೆ ಬಿಡಿ ನನಗೆ ಅಡ್ಡಿಪಡಿಸುವುದು ಬೇಡ

(ಗೊಂದಲ)

ಅಧ್ಯಕ್ಷರು – ದಯಮಾಡಿ, ಎಲ್ಲ ಕುಳಿತುಕೊಳ್ಳಿ (ಗೊಂದಲ) ಅವರು ಮಾತನಾಡುತ್ತಿದ್ದಾರೆ

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ – ತಮಿಳುನಾಡಿನ ಮುಖ್ಯಮಂತ್ರಿಗಳು ಈ ತರಹದ ಉದ್ಧಟತನದ ಉತ್ತರವನ್ನು ಕೊಟ್ಟಿದ್ದಾರೆ ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯವರು ಆ ತರಹ ಮಾತನಾಡಿಲ್ಲವೆನ್ನುವ ರೀತಿಯಲ್ಲಿ, ಇಲ್ಲಿ ಸದನದಲ್ಲಿ ಕುಮಾರಸ್ವಾಮಿಯವರು, ನಾವು ಮಾತುಕತೆ ಮೂಲಕ ಇದಕ್ಕೆ ಪರಿಹಾರ ಕಂಡುಹಿಡಿಯುತ್ತೇವೆಂದು ಹೇಳಿದ್ದಾರೆ ಮಾನ್ಯ ಕುಮಾರಸ್ವಾಮಿಯವರ ಈ ತರಹದ ಹೇಳಿಕೆಯನ್ನು ನಾವು ಇವತ್ತು condemn ಮಾಡುತ್ತಿಲ್ಲ ಕರುಣಾನಿಧಿಯವರು ಹೇಳಿಕೆಯನ್ನು ಕೊಟ್ಟಿದ್ದಾರೆ, ಇದು ಕೇವಲ ಕುಮಾರಸ್ವಾಮಿಯವರಿಗೆ ಮಾತ್ರವಲ್ಲ, ಇಡೀ ರಾಜ್ಯದ ಜನರಿಗೆ ಅವಹೇಳನ ಮಾಡಿದ್ದಾರೆಂದು ಹೇಳಿದರೆ ಏನು ತಪ್ಪು? In a sense we are going to help the Chief Minister ಅದಕ್ಕೆಲ್ಲ ಚೆಲುವರಾಯಸ್ವಾಮಿಯವರೆ, ಎಲ್ಲ ಗೊತ್ತಿದೆ, ಏನು ನೀವು ಮಾತನಾಡುವುದು? (ಗೊಂದಲ) ಹೇಳಿ? ನೀವು ಇಲ್ಲಿ ಬನ್ನಿ, (ಗೊಂದಲ) ತಾಕತ್ತಿದ್ದರೆ ಇಲ್ಲಿ ಬನ್ನಿ

(ಗೊಂದಲ)

ಅಧ್ಯಕ್ಷರು – ಎಲ್ಲ ಕುಳಿತುಕೊಳ್ಳಿ (ಗೊಂದಲ) ಯಡಿಯೂರಪ್ಪನವರು ಮಾತನಾಡುತ್ತಿದ್ದಾರೆ, ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ, ಮಧ್ಯದಲ್ಲಿ ಎಲ್ಲರೂ interfere ಆದರೆ ಹೇಗೆ?

(ಗೊಂದಲ)

ಶ್ರೀ ಎನ್ ಚೆಲುವರಾಯಸ್ವಾಮಿ – ಅವರು intervene ಆಗುವ ಸಂದರ್ಭದಲ್ಲಿ ಯಾವ ರೀತಿಯಾಗಿ intervene ಆಗಬೇಕೋ ಆ ರೀತಿಯಾಗಬೇಕು ಅದು ಬಿಟ್ಟು ನೇರವಾಗಿ ಕುಳಿತುಕೊಳ್ಳಿರಿ ಎಂದರೆ ಅರ್ಥವೇನು?

(ಗೊಂದಲ)

ಅಧ್ಯಕ್ಷರು – ಅವರು ಮಾತನಾಡುತ್ತಿದ್ದಾರೆ

(ಗೊಂದಲ)

ಶ್ರೀ ಎನ್ ಚೆಲುವರಾಯಸ್ವಾಮಿ – "ಕುಳಿತುಕೊಳ್ಳಿರಿ, ತಾಕತ್ತಿದ್ದರೆ ಬನ್ನಿ" ಎಂದರೆ ಅರ್ಥವೇನು? ಇದು ಅವರಿಗೆ ಗೌರವ ತರುತ್ತದೆಯೇ?

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ – (ಗೊಂದಲ) ನೀವು ಮೋಸಗಾರರು

(ಗೊಂದಲ)

ಶ್ರೀ ಎನ್ ಚೆಲುವರಾಯಸ್ವಾಮಿ – ನೀವು ಮೋಸಗಾರರು ಈ ರಾಜ್ಯದಲ್ಲಿ 50 ವರ್ಷ ಆಡಳಿತ ಮಾಡಿದಂಥ ನೀವು ಮೋಸಗಾರರು ನೀವು ರಾಜ್ಯಕ್ಕೆ ಅನ್ಯಾಯ ಮಾಡಿದ್ದೀರಾ ನೀವು ಅಧಿಕಾರಕ್ಕೋಸ್ಕರ ಇರುವುದು

(ಗೊಂದಲ)

ಅಧ್ಯಕ್ಷರು .– ದಯಮಾಡಿ, ಕುಳಿತುಕೊಳ್ಳಿ ಈ ತರಹ ಮಾತನಾಡಿದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ ಅವರೇನೋ ಮಾತನಾಡುತ್ತಿದ್ದಾರೆ, ಮಧ್ಯದಲ್ಲಿ ಈ ತರಹ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ? ಈಗ ಮಾತನಾಡಿ ಯಡಿಯೂರಪ್ಪನವರೆ

(ಗೊಂದಲ)

ಶ್ರೀ ಎನ್ ಚೆಲುವರಾಯಸ್ವಾಮಿ – ಈಗ prove ಮಾಡಿ ಸ್ವಾಮಿ ಮೋಸಗಾರರು ಯಾರ್ಯಾರು, 50 ವರ್ಷಗಳಲ್ಲಿ ಏನೇನು ಮಾಡಿದ್ದಾರೆಂದು ಚರ್ಚೆಯಾಗಲಿ

(ಗೊಂದಲ)

ಅಧ್ಯಕ್ಷರು – ಈಗ ಮಾತನಾಡಿ ಎಲ್ಲರೂ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ – ರಾಜ್ಯವನ್ನು ಹಾಳು ಮಾಡಿದ್ದನ್ನು ನಾವು ಹೇಳಬೇಕಾಗಿಲ್ಲ ಜನಾರ್ಧನ ರೆಡ್ಡಿಯವರೇ ಹೇಳಿದ್ದಾರೆ ಮತ್ತು ಇವರ ಪಕ್ಷದ ಅಧ್ಯಕ್ಷರಾದಂಧ ವಸಂತ ಬಂಗೇರರವರು ನಿನ್ನೆ ಹೇಳಿದ್ದಾರೆ

(ಗೊಂದಲ)

ಶ್ರೀ ಎನ್ ಚೆಲುವರಾಯಸ್ವಾಮಿ – ನೀವು ಜನಾರ್ಧನ ರೆಡ್ಡಿ ವಿಷಯದಲ್ಲಿ prove ಮಾಡಿ

(ಗೊಂದಲ)

ಅಧ್ಯಕ್ಷರು – ಏಕೆ ಪದೇ ಪದೇ ಎದ್ದು ನಿಂತುಕೊಳ್ಳುತ್ತೀರಿ? (ಗೊಂದಲ) ಎಲ್ಲರೂ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎನ್ ಚೆಲುವರಾಯಸ್ವಾಮಿ – ಇವರಿಗೆ ಗುಂಡಿಗೆ ಇದ್ದರೆ, 150 ಕೋಟಿ ರೂಪಾಯಿಗಳ ಹಗರಣವನ್ನು prove ಮಾಡಲಿ

(ಗೊಂದಲ)

ಅಧ್ಯಕ್ಷರು – ಯಾವುದೂ ರೆಕಾರ್ಡ್‌ಗೆ ಹೋಗಕೂಡದು

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ನಡಾವಳಿಯನ್ನು ರೆಕಾರ್ಡ್ ಮಾಡಿರುವುದಿಲ್ಲ)

(ಗೊಂದಲ)

ಅಧ್ಯಕ್ಷರು – ಎಲ್ಲರೂ ಕುಳಿತುಕೊಳ್ಳಿ (ಗೊಂದಲ) ಚೆಲುವರಾಯ ಸ್ವಾಮಿಯವರೇ, ಕುಳಿತುಕೊಳ್ಳಿ ನಾನೀಗ ಯಡಿಯೂರಪ್ಪನವರನ್ನು ಕರೆದಿದ್ದೇನೆ, ಅವರು ಮಾತನಾಡುತ್ತಾರೆ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ – ನಾನು ಅತ್ಯಂತ ವಿನಯದಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಮಾನ್ಯ ರಮೇಶ್ ಕುಮಾರ್‌ರವರು ಆವೇಶದಲ್ಲಿ ಆ ಮಾತನ್ನು ಆಡಿರಬಹುದು ದಾಖಲೆಗಳನ್ನು ತರಿಸಿ ನೋಡಿ ದಯಮಾಡಿ ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದಂಥ ಮಾತನ್ನು, ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಹೇಳಿರುವ ಮಾತು ತಾವು ದಾಖಲೆಗೆ ಹೋಗಿದ್ದರೆ ತೆಗೆದು ಹಾಕಬೇಕು ತರಿಸಿ ನೋಡಿ

ಅಧ್ಯಕ್ಷರು – ನೋಡಿ ತೆಗೆಸಿ ಹಾಕುತ್ತೇನೆ

ಶ್ರೀ ಬಿ ಎಸ್ ಯಡಿಯೂರಪ್ಪ – ಎರಡನೆಯದಾಗಿ, ಮಾನ್ಯ ಧರ್ಮಸಿಂಗ್‌ರವರ ಬಗ್ಗೆ ನಮಗೆ ತುಂಬ ಗೌರವವಿದೆ ಅವರು ರಾಜಕಾರಣದಲ್ಲಿ ಹಿರಿಯರಿದ್ದಾರೆ, ಅವರಿಗೆ ಸಾಕಷ್ಟು ಅನುಭವವಿದೆ, ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದಂಥವರಾಗಿದ್ದಾರೆ ನಾನೇನು ತಪ್ಪು ಹೇಳಿದೆ, ಸ್ವಾಮಿ? ತಮಿಳುನಾಡಿನ ಮುಖ್ಯಮಂತ್ರಿಗಳು ಯಾವ ರೀತಿ ಉದ್ಧಟತನದಿಂದ ಮಾತನಾಡಿದ್ದಾರೋ ಅದಕ್ಕಿಂತ ಹೆಚ್ಚಿನ ಉದ್ಧಟತನದಿಂದ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ ನಾನು ಕೇಳುತ್ತೇನೆ, ನಮ್ಮ ರಾಜ್ಯದಲ್ಲಿ ಬೆಳಗಾಂನಲ್ಲಿ ವಿಧಾನಸೌಧ ಕಟ್ಟುತ್ತೇವೆಂದು ಹೇಳಿದರೆ, ನಾನು ಸುಪ್ರೀಂ ಕೋರ್ಟ್‌ಗೆ ಹೋಗುತ್ತೇನೆ, ಅದು ಹೇಗೆ ಕಟ್ಟಡ ಕಟ್ಟುತ್ತಾರೋ ನೋಡುತ್ತೇನೆಂದು ಹೇಳುತ್ತಾರೆ ಇವತ್ತು ತಮಿಳುನಾಡಿನ ಮುಖ್ಯಮಂತ್ರಿಗಳು ಮಾತನಾಡಿರುವುದು ಇರಬಹುದು, ಅಥವಾ ಮಹಾರಾಷ್ಟ್ರ ಮುಖ್ಯಮಂತ್ರಿ ಮಾತನಾಡಿರುವುದು ಇರಬಹುದು, ನಾನು ಇದನ್ನು ಖಂಡನೆ ಮಾಡುತ್ತೇನೆ ಕನ್ನಡ ನಾಡಿನ ಜನರಿಗೆ ಅಪಮಾನ ಮಾಡುವಂಥ ಕೆಲಸವನ್ನು ತಮಿಳುನಾಡಿನ ಮುಖ್ಯಮಂತ್ರಿಗಳೂ ಮಾಡಬಾರದು, ಮಹಾರಾಷ್ಟ್ರದ ಮುಖ್ಯಮಂತ್ರಿಗಳೂ ಮಾಡಬಾರದು ನಮ್ಮ ರಾಜ್ಯದಲ್ಲಿ, ಬೆಳಗಾಂನಲ್ಲಿ ನಾವು ವಿಧಾನಸೌಧವನ್ನು ಕಟ್ಟುವುದಕ್ಕೆ ಇನ್ಯಾರದೋ ಅಪ್ಪಣೆ ಪಡೆಯಬೇಕಾಗಿದೆಯೇ? ಮಹಾಜನ್ ಆಯೋಗದ ವರದಿ ಒಟ್ಟಾಗಿ ಒಪ್ಪಿಕೊಂಡು ಕೊಟ್ಟಂಥ ತೀರ್ಪು ಅಲ್ಲವೇ? ಇವತ್ತು ರಾಜ್ಯದ ಜನರನ್ನು ಕೆರಳಿಸುವಂಥ ಉದ್ಧಟತನದ ಮಾತು

ಇದಲ್ಲವೇ? ಮೊದಲು ಇದನ್ನು ಕಾಂಗ್ರೆಸ್‌ನ ಮುಖಂಡರು ಖಂಡನೆ ಮಾಡಬೇಕಾಗಿತ್ತು ಇವತ್ತು ಕಾವೇರಿ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ತಮಿಳುನಾಡಿನ ಮುಖ್ಯಮಂತ್ರಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ಯಾವ ರೀತಿ ಸ್ಪಂದಿಸಬೇಕಾಗಿತ್ತೋ, ಯಾವ ರೀತಿ ಗೌರವಯುತವಾಗಿ ಮಾತನಾಡಬೇಕಾಗಿತ್ತೋ, ಆ ರೀತಿ ಮಾತನಾಡಿಲ್ಲ ಇವತ್ತು "tribunal ತೀರ್ಮಾನವಾಗಿದೆ, ನಾನು ಮಾತುಕತೆಯಾಡುವ ಸ್ಥಿತಿಯಲ್ಲಿಲ್ಲ" ಎಂದು ಹೇಳಲಿ ನಾವು ಅದನ್ನು ವಿರೋಧ ಮಾಡುವುದಿಲ್ಲ ಆದರೆ, ಅದರ ಬದಲಿಗೆ ನಾವೇ ಇಲ್ಲಿ ಚರ್ಚೆ ಮಾಡಿ ಪ್ರಧಾನಿಯವರ ಸಲಹೆಯಂತೆ ನಮ್ಮ ಮುಖ್ಯಮಂತ್ರಿಗಳು ಮಾತುಕತೆ ಮೂಲಕ ಇದನ್ನು ಬಗೆಹರಿಸಿಕೊಳ್ಳೋಣವೆಂದು ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಕೇಳಿದಾಗ ಅವರು ಸೌಜನ್ಯದ ರೀತಿಯಲ್ಲಿ ನಡೆದುಕೊಳ್ಳಬೇಕಾಗಿತ್ತು ಆ ರೀತಿ ನಡೆದುಕೊಳ್ಳದೇ ಈ ರೀತಿ ಉದ್ಧಟತನದ ಹೇಳಿಕೆಯನ್ನು ಕೊಟ್ಟಿರುವಂಥದ್ದು, ತಮಿಳರು, ಕನ್ನಡಿಗರ ಬಾಂಧವ್ಯವನ್ನು, ಸಂಬಂಧವನ್ನು, ಹಾಳು ಮಾಡುವಂಥ ವ್ಯವಸ್ಥಿತವಾದ ಒಂದು ಪಿತೂರಿ ಎಂದು ಇದು ಆಗುತ್ತದೆ ಆದರೂ ಸಹ ನಿಮಗೆ ವಿನಂತಿ ಮಾಡುತ್ತೇನೆ ಮೊನ್ನೆ ಕಾವೇರಿ ಇಶ್ಯೂನಲ್ಲಿ ತಮಿಳುನಾಡಿನ ಜನ ಯಾರು ಇಲ್ಲಿ ವಾಸ ಮಾಡುತ್ತಿದ್ದಾರೆ, ಕನ್ನಡಿಗರೆಂದು ಇಲ್ಲಿ ನಮಗೆ ಬೆಂಬಲಿಗರಾಗಿ ನಿಂತಿದ್ದಾರೆ ಅದಕ್ಕೆ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ತಮಿಳುನಾಡಿನ ಮುಖ್ಯಮಂತ್ರಿಗಳ ಹೇಳಿಕೆಯಿಂದ ಇಲ್ಲಿ ಕನ್ನಡಿಗರು ಮತ್ತು ತಮಿಳರ ಸಂಬಂಧವನ್ನು ಹಾಳು ಮಾಡುವುದಕ್ಕೆ ಅವರಿಂದ ಸಾಧ್ಯವಿಲ್ಲ ರಾಜಕೀಯ ಸ್ವಾರ್ಥಕ್ಕಾಗಿ ಯಾರು ಏನು ಬೇಕಾದರೂ ಅವರು ಮಾತನಾಡಬಹುದು ಆದರೆ, ಕರ್ನಾಟಕದ ವಿಷಯ ಬಂದಾಗ ನಾನು ಸನ್ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಕೇಳುತ್ತೇನೆ, ಪ್ರತಿ ಪಕ್ಷದ ನಾಯಕರನ್ನು ಕೇಳುತ್ತೇನೆ, ನಾವೇನು ಮಾಡಬಹುದಾಗಿತ್ತು? ನಿಮ್ಮ ಜೊತೆ ಮೂರು ಬಾರಿ ಸಮಾಲೋಚನೆ ಮಾಡಿದ್ದೇವೆ ನೀವು ಕೊಟ್ಟಂಥ ತೀರ್ಮಾನದಂತೆ ಕೋರ್ಟ್‌ಗೆ ಹೋಗುವುದಕ್ಕೆ ತೀರ್ಮಾನ ಮಾಡಿದ್ದೇವೆ Senior Counsel ಜೊತೆ ಚರ್ಚೆ ಮಾಡಿದ್ದೇವೆ ಇಲ್ಲಿ ಒಟ್ಟಾಗಿ ತೆಗೆದುಕೊಟ್ಟಂಥ ತೀರ್ಮಾನದಂತೆ ನಾವು, ನಮ್ಮ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ, ಕನ್ನಡಿಗರ ಪರವಾಗಿ ಮುಂದುವರಿಯುತ್ತಿದ್ದೇವೆ ಶಾಂತ ರೀತಿಯಲ್ಲಿ ಹೋರಾಟಗಳು ನಡೆಯುತ್ತಿವೆ ಇಂಥ ಒಂದು ಸಂದರ್ಭದಲ್ಲಿ ನಿಮ್ಮದೇನು ನಿರೀಕ್ಷೆ

ಇದೆ ಹೇಳಿ? ನಿಮ್ಮದೇನು ಅಪೇಕ್ಷೆ ಇದೆ ಹೇಳಿ? (ಗೊಂದಲ) ದಯಮಾಡಿ, ರಮೇಶ್‌ಕುಮಾರ್‌ರವರು ಹೇಳಿದಂಥ ಮಾತುಗಳನ್ನು ಕಡತದಿಂದ ತೆಗೆದು ಹಾಕಬೇಕು ಇಲ್ಲದಿದ್ದರೆ, ಅನಗತ್ಯವಾಗಿ ಗೊಂದಲಕ್ಕೆ ಅವಕಾಶವಾಗುತ್ತದೆ

(ಗೊಂದಲ)

ಅಧ್ಯಕ್ಷರು – ನೋಡುತ್ತೇನೆ ಯಾವುದೇ

ಶ್ರೀ ಬಿ ಎಸ್ ಯಡಿಯೂರಪ್ಪ – ರಮೇಶ್‌ಕುಮಾರ್‌ರವರಂಥ ಹಿರಿಯರು ಏನು ಬೇಕಾದರೂ ಮಾತನಾಡುವುದಕ್ಕೆ ಇಲ್ಲಿ ಆಗುವುದಿಲ್ಲ ಅದನ್ನು ನಾವು tolerate ಮಾಡುವುದಕ್ಕಾಗುವುದಿಲ್ಲ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ – ಯಡಿಯೂರಪ್ಪನವರು, ಯಾವುದೋ ವಿಚಾರವನ್ನು ನಾವು ಕೇಳಿದರೆ ಇನ್ನೆಲ್ಲೋ ಹೋಗುತ್ತಿದ್ದಾರೆ ಮಹಾರಾಷ್ಟ್ರಕ್ಕೆ ಹೋದರು

ಶ್ರೀ ಬಿ ಎಸ್ ಯಡಿಯೂರಪ್ಪ – ನಿಮಗೆ ಬೇಕಾದ್ದು ಮಾತನಾಡುವುದಕ್ಕಾಗುವುದಿಲ್ಲ

(ಗೊಂದಲ)

ಅಧ್ಯಕ್ಷರು – ಈಗ ನಾಗರಾಜ್‌ರವರೆ, ನಾನು ಕೇಳಿಕೊಂಡೆ ಬಜೆಟ್‌ಗೆ ಮೊದಲೇ ಆಗಲಿ ಎಂದಿರಿ ಇದರಿಂದ ನೀವು ಮಾಡುವುದೇನಪ್ಪ ಎಂದರೆ ಯಾವುದೋ ಕಾರ್ಯಕಲಾಪಗಳು ಇಲ್ಲಿ ನಡೆಯಬಾರದು, ಆ ತರಹ ನೀವು ಮಾಡುತ್ತಿದ್ದೀರಿ ಏನಿದು? ಆಮೇಲೆ ಅವರ ಹತ್ತಿರ ಕೇಳೋಣ, ಇದು ಸ್ಟಾರ್ಟ್ ಆಗಲಿ ಎಂದರೂ ಕೇಳಲಿಲ್ಲ ನೋಡಿ ಈಗ (ಗೊಂದಲ) Emotional ವಿಚಾರಗಳನ್ನೆಲ್ಲ ಎತ್ತಿಕೊಂಡು

ಶ್ರೀ ಕೆ ಆರ್ ರಮೇಶ್‌ಕುಮಾರ್ – ಬಹಳ ಸೀಮಿತವಾದಂಥ ವಿಷಯವನ್ನು ನಾನು ಪ್ರಸ್ತಾಪ ಮಾಡಿದ್ದೇನೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ತಮಿಳುನಾಡಿನ

ಮುಖ್ಯಮಂತ್ರಿಗಳ ಜೊತೆ ತಾನು ಫೋನ್ ನಲ್ಲಿ ಸಂಭಾಷಣೆ ಮಾಡಿದಾಗ ಈ ವಿಚಾರವನ್ನು ಪ್ರಸ್ತಾಪ ಮಾಡಿದೆ ಎಂದು ಅವರು ಪತ್ರಿಕೆಗಳಿಗೆ, ಮಾಧ್ಯಮಗಳಿಗೆ ಹೇಳಿದರು ತಮಿಳುನಾಡಿನ ಮುಖ್ಯಮಂತ್ರಿಗಳು ಆ ಮಾತನ್ನು ನಿರಾಕರಿಸಿದರು ನಾನು ಬೇರೆ ಯಾವುದಕ್ಕೂ ಹೋಗುತ್ತಿಲ್ಲ ಇವರು ಹೇಳಿದಂಥ ಮಾತನ್ನು ನಾನು ಫೋನ್ ನಲ್ಲಿ ಇಂಥದ್ದನ್ನು ಹೇಳಿದ್ದೇನೆ, ಪ್ರಸ್ತಾಪ ಮಾಡಿದ್ದೇನೆ ಎಂಬುದು ಅವರು ಅದನ್ನು ನಿರಾಕರಿಸಿದ್ದಾರೆ, ಸಭಾ ನಾಯಕರನ್ನು ಸುಳ್ಳುಗಾರರೆಂದು ಹೇಳುವ ಮಟ್ಟಕ್ಕೆ ನಾನು ಹೋಗುವುದಿಲ್ಲ ಆದರೆ, ಈ ಸದನದ ನಮ್ಮೆಲ್ಲರ ಮಾನ –ಮರ್ಯಾದೆ ಏನಾಗುತ್ತದೆ ಎನ್ನುವ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೆ ತಾವು ಕಡತ ತರಿಸಿ 11 ಗಂಟೆ 25 ನಿಮಿಷವಾಗಿದೆ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಿಗೆ ಕಡತ ತೋರಿಸಿ ನಾನು ಆಡಿರಬಹುದಾದ ಮಾತುಗಳಲ್ಲಿ ಸಭಾನಾಯಕರನ್ನು ಕುರಿತಾಗಲಿ, ಬೇರೆ ಯಾರನ್ನು ಕುರಿತಾಗಲಿ ಅವಹೇಳನಕಾರಿಯಾದಂಥ ಮಾತುಗಳನ್ನು, ಆಕ್ಷೇಪಾರ್ಹವಾದ ಮಾತುಗಳನ್ನು ಹೇಳಿದ್ದರೆ, ಒಂದು ಗಂಟೆಯೊಳಗೆ ಅವರು ತೀರ್ಮಾನ ಕೊಡಲಿ, ಅನಂತರ ಒಂದು ನಿಮಿಷ ಈ ಸದನದಲ್ಲಿ ನಾನು ಸದಸ್ಯನಾಗಿ ಇರುವುದಿಲ್ಲ ತಕ್ಷಣ ರಾಜೀನಾಮೆ ಕೊಡುತ್ತೇನೆ ತಕ್ಷಣ ತಾವು ಸಂಸದೀಯ ವ್ಯವಹಾರಗಳ ಸಚಿವರು ತಾವು ಭಾಷೆ ಅರ್ಥ ಮಾಡಿಕೊಳ್ಳಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ – ರಾಜೀನಾಮೆ ಕೊಡುವ ಪ್ರಶ್ನೆ ಎಲ್ಲಿ ಬರುತ್ತದೆ? ಮುಖ್ಯಮಂತ್ರಿಗಳ ಬಗ್ಗೆ ಆಡಿರುವಂಥ ಮಾತು, ತಮಿಳುನಾಡಿನ ಮುಖ್ಯಮಂತ್ರಿಗಳು

(ಗೊಂದಲ)

ಅಧ್ಯಕ್ಷರು – ರಮೇಶ್‌ಕುಮಾರ್‌ರವರೆ, ಏನೋ unparliamentarily words

(ಗೊಂದಲ)

ಶ್ರೀ ಕೆ ಆರ್ ರಮೇಶ್‌ಕುಮಾರ್ – ಅವರು ಮಾತನಾಡುವಾಗ ನಾನು yield ಆಗಿಲ್ಲ

ಅಧ್ಯಕ್ಷರು – ಈಗ ಏನಾಗಿದೆ ಎಂದರೆ, ಮುಂದಿನ ಪ್ರಶ್ನೆಗೆ ಹೋಗೋಣ ಮುಂದಕ್ಕೆ ಹೋಗೋಣ ನಾನು ಹೇಳುವುದೇನೆಂದರೆ, ಮುಖ್ಯಮಂತ್ರಿಗಳು ಬರಲಿ ಯಾವ context ನಲ್ಲಿ ಅವರೇನು ಹೇಳಿದರು ಎಂದು ಅವರನ್ನೇ ಕೇಳಿ

ಶ್ರೀ ಕೆ ಆರ್ ರಮೇಶ್‌ಕುಮಾರ್ – ತಪ್ಪು ಮಾಹಿತಿ ಹೋಗುವುದು ಬೇಡ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಶ್ರೀಮಾನ್ ಯಡಿಯೂರಪ್ಪನವರು ನಾನು ಹೇಳುವ ಮಾತನ್ನು ಮತ್ತೊಮ್ಮೆ ಕೇಳಲಿ ಕರುಣಾನಿಧಿಯವರು ನಮ್ಮ ಮುಖ್ಯಮಂತ್ರಿಗಳಾಡಿದ ಮಾತುಗಳನ್ನು ನಿರಾಕರಣೆ ಮಾಡಿರುವುದರಿಂದ ನಮಗಿಂಥ ಸ್ಥಿತಿ ಒದಗಿದೆ ಎಂದು ನಾನು ಹೇಳಿದ್ದೇನೇ ಹೊರತು

ಶ್ರೀ ಎನ್ ಚೆಲುವರಾಯಸ್ವಾಮಿ – ಸುಳ್ಳುಗಾರರೆಂದು ಹೇಳಬೇಕಾಗುತ್ತದೆಂದು ಹೇಳಿದರು

ಅಧ್ಯಕ್ಷರು – ಆಯಿತು ತೆಗೆಸಿ ನೋಡೋಣ ಈಗ ಇದು ಇಲ್ಲಿಗೆ ಮುಕ್ತಾಯ

ಶ್ರೀ ಕೆ ಆರ್ ರಮೇಶ್‌ಕುಮಾರ್ – ನೀವೇ ಕಡತ ನೋಡಿ

ಅಧ್ಯಕ್ಷರು – ಆಯಿತು ರಮೇಶ್‌ಕುಮಾರ್‌ರವರೆ, ಅದನ್ನು ತೆಗೆಸಿ ನೋಡೋಣ

ಶ್ರೀ ಕೆ ಆರ್ ರಮೇಶ್‌ಕುಮಾರ್ – ಈ ತರಹ ಆಡಿದ ಮಾತುಗಳನ್ನು ಕೂಡ ಅರ್ಥ ಮಾಡಿಕೊಳ್ಳದೇ ಹೋದರೆ ಹೇಗೆ? ನಾವು ಮಾತುಕತೆಯ ಮುಖಾಂತರ ಅದು ಬಗೆಹರಿಯುವುದು ಬೇಡವೆಂದು ಹೇಳಿದೆವಾ? ನಾವು ಅಡ್ಡ ಮಲಗಿದ್ದೇವಾ? ಸೌಹಾರ್ದತೆ ಇರುವುದು ಬೇಡ, ಜಗಳ ಆಗಬೇಕು, ಎಲ್ಲ ಬೆಂಕಿ ಹತ್ತಿಕೊಂಡು ಸಾಯಲಿ ಎಂದು ನಾವು ಹೇಳಿದೆವಾ? ನಾವೇನೂ ಆ ಮಾತು ಹೇಳಿಲ್ಲ ನಾನು ಹೇಳಿದ್ದಿಷ್ಟೇ,(ಗೊಂದಲ) ಸ್ವಾಮಿ ದಯಮಾಡಿ ಕೇಳಿ, ಕನ್ನಡ ಓದುವುದಕ್ಕೆ ಬರುವುದಾದರೆ, proceedings ತರಿಸಿ ನೀವೇ ಓದಿ you be the judge ನೀವೇ judge ಆಗಿ

(ಗೊಂದಲ)

ಅಧ್ಯಕ್ಷರು – ಆಯಿತು ರಮೇಶ್‌ಕುಮಾರ್‌ರವರೆ ಅದೇಕೆ ಅಷ್ಟೊಂದು Emotional ಆಗುತ್ತೀರಿ? ನೋಡೋಣ ಆಯಿತು, ಏನೋ ಹೇಳುತ್ತಾರೆ

ಶ್ರೀ ಕೆ ಆರ್ ರಮೇಶ್‌ಕುಮಾರ್ – ಮಾತು ಮಾತಿಗೂ ಸ್ವಲ್ಪವೂ ಕೂಡ ಜವಾಬ್ದಾರಿ ಇಲ್ಲದೇ ಈ ರೀತಿ ಮಾತನಾಡಬಾರದು ಈಶ್ವರಪ್ಪನವರೇ ನೀವು ಸಂಬಂಧಪಟ್ಟ ಇಲಾಖಾ ಸಚಿವರು ಇಲ್ಲಿ ಕುಳಿತಿದ್ದೀರಿ ನಾನು ಪದೇ ಪದೇ ಹೇಳುತ್ತಿದ್ದೇನೆ ಅವರು ಆಡಿರಬಹುದಾದಂಥ ಮಾತುಗಳಿಂದ ತಮಗೆ ಈ ಸ್ಥಿತಿ ಒದಗಿದೆ ನಮ್ಮ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ ನಮಗೆ ಅಪಮಾನವಾಗಿದೆ ಸಭಾನಾಯಕರನ್ನು ಸುಳ್ಳುಗಾರರೆಂದು ಹೇಳುವ ಮಟ್ಟಕ್ಕೆ ನಾನು ಹೋಗುವುದಿಲ್ಲವೆಂದು ಹೇಳಿದ್ದೇನೆ ರೆಕಾರ್ಡ್ ತರಿಸಿ ನೋಡಿ ನಾನು ಹೇಳಿದ್ದನ್ನು ಅರ್ಥ ಮಾಡಿಕೊಳ್ಳಲಾರದೇ

ಅಧ್ಯಕ್ಷರು – ಆಯಿತು, ನೋಡಿಸೋಣ ಬಿಡಿ ಈಗ ಅವರೇನು ಹೇಳಿದ್ದಾರೆ, ನೀವೇನು ಅರ್ಥ ಮಾಡಿಕೊಂಡಿದ್ದೀರಿ ಎಂದು ನೋಡಿಸೋಣ ಯಾವುದನ್ನು ತೆಗೆಸಿಹಾಕಬೇಕು ಎಂಬುದು ಅಗತ್ಯವಿದೆ ಅದನ್ನು ತೆಗೆಸಿ ಹಾಕೋಣ ಅದಕ್ಕೆ ಏಕೆ ಅದನ್ನು ಲಂಬಿಸಿಕೊಂಡು ಹೋಗುತ್ತೀರಿ?

(ಗೊಂದಲ)

ಶ್ರೀ ಕೆ ಆರ್ ರಮೇಶ್‌ಕುಮಾರ್ – ನಾನು ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ ಇದೇ ಸದನದಲ್ಲಿ ದಿವಂಗತ ಗೋಪಾಲಗೌಡರು, ನಿಜಲಿಂಗಪ್ಪನವರು ಸರ್ಕಾರದ ಬಗ್ಗೆ ಏನು ಹೇಳುತ್ತಾರೆ? ಪ್ರಕಾಶ್‌ರವರೆ, ನೀವು ನಾವು 10 ಸಲ ಈ ವಿಚಾರ ಮಾಡಿದ್ದೇವೆ ವಿರೋಧ ಪಕ್ಷದಲ್ಲಿ ಕುಳಿತು ಗೋಪಾಲಗೌಡರು ಮಾತನಾಡುತ್ತಾರೆ, ಮುತ್ತೈದೆಯರ ಮಕ್ಕಳ ಸರ್ಕಾರವೆಂದು ಈ ಸರ್ಕಾರವನ್ನು ಕರೆಯುವುದಕ್ಕೆ ನನಗೆ ಇಷ್ಟವಿಲ್ಲ, ಮುಂಡೆ ಮಕ್ಕಳ ಸರ್ಕಾರವೆಂದು ಕರೆದರೆ ಅದು ಅವಾಚ್ಯವಾಗುತ್ತದೆಂದು ಹೇಳುತ್ತಾರೆ ಇದೆಲ್ಲಾ ಸಂಸದೀಯ

ಭಾಷೆಯಲ್ಲಿರತಕ್ಕಂಥ ಚಾಕಚಕ್ಯತೆ ಅಲ್ಲಿಗೆ ಗೋಪಾಲಗೌಡರು ಅವತ್ತು ಉಪಯೋಗಿಸಿದ ಭಾಷೆ ಹಲ್ಕಾ ಭಾಷೆಯೇ? ಸಂಸದೀಯ ಭಾಷೆಯಲ್ಲಿ ನಾನು ಪ್ರಯೋಗ ಮಾಡಿರತಕ್ಕಂಥೊಂದು ಪದ ಆಕ್ಷೇಪಾರ್ಹವಾದುದು ಇದ್ದಿದ್ದರೆ ಒಂದು ಕ್ಷಣ ಈ ಸದನದಲ್ಲಿ ನಾನು ಕುಳಿತುಕೊಳ್ಳುವುದಕ್ಕೆ ನಾನು ತಯಾರಿಲ್ಲ ದಯಮಾಡಿ, ತಾವು ತೀರ್ಪು ಕೊಡಬೇಕೆಂದು ಕೇಳುತ್ತೇನೆ

ಅಧ್ಯಕ್ಷರು – ನೊಡೋಣ ಬಿಡಿ

ಶ್ರೀ ವಾಟಾಳ್ ನಾಗರಾಜ್ – ಏನು ಮಾತನಾಡುತ್ತೀರಿ ನೀವು? ದಯವಿಟ್ಟು ಕ್ಷಮಿಸಿ ಇಲ್ಲ ಬಿಡಿ ಇದರಲ್ಲಿ ಉದ್ವೇಗಕ್ಕಿಂತ ಹೆಚ್ಚಾಗಿ ರಮೇಶ್‌ಕುಮಾರ್‌ರವರು ಈಗೇನು ಹೇಳಿದ್ದಾರೆ, ಅದು ಸತ್ಯ ಅವರೇನು ನಮ್ಮ ಮುಖ್ಯಮಂತ್ರಿಗಳನ್ನು ಸುಳ್ಳುಗಾರ ಎಂದು ಹೋಲಿಸಲಿಲ್ಲ ತಮಿಳುನಾಡು ಮುಖ್ಯಮಂತ್ರಿಗಳು ನಮ್ಮ ಮುಖ್ಯಮಂತ್ರಿಗಳು ಮಾತನಾಡಿರುವುದು ನಿಜ ಕಾವೇರಿಯ ಬಗ್ಗೆ ಹೇಳಿರುವುದು ನಿಜ ಆದರೆ ಆ ಮಾತನ್ನು ತಪ್ಪಿಸಿಕೊಂಡವರು ಕರುಣಾನಿಧಿಯವರು, ನಮ್ಮ ಮುಖ್ಯಮಂತ್ರಿಯವರಲ್ಲ ಸತ್ಯ, ನಮ್ಮ ಮುಖ್ಯಮಂತ್ರಿಗಳು ಕೇಳಿದ್ದಾರೆ ಯುಗಾದಿ ಹಬ್ಬದ ಶುಭಾಶಯ ಕೋರಿ ನಾವು ಕಾವೇರಿಯ ಬಗ್ಗೆ ಮಾತನಾಡಬೇಕೆಂದು ಹೇಳಿದ್ದಾರೆ ಅದಕ್ಕೆ ಅವರು ಒಪ್ಪಿಕೊಂಡು ಮಾತುಕತೆಯ ಮೂಲಕ ಬಗೆಹರಿಸುತ್ತೇವೆಂದು ತಮಿಳುನಾಡಿನಲ್ಲಿ ಹೇಳಿಕೆ ಕೊಟ್ಟರು ಯಾವಾಗ ಮಾಜಿ ಮುಖ್ಯಮಂತ್ರಿ ಜಯಲಲಿತಾರವರು ರಾಜಕೀಯ ಹೇಳಿಕೆ ಕೊಟ್ಟ ತಕ್ಷಣ, ನಾನು ಆ ಮಾತು ಆಡಿಲ್ಲವೆಂದು ಅವರ ರಾಜಕೀಯಕೋಸ್ಕರವಾಗಿ ನಮ್ಮನ್ನು ಕತ್ತಲಲ್ಲಿ ಇಟ್ಟರು ತಪ್ಪು ಮಾಡಿರತಕ್ಕಂಥದ್ದು ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯವರು, ಅದರ ಬಗ್ಗೆ ಬೇರೆ ಪ್ರಶ್ನೆಯಿಲ್ಲ ಎರಡನೆಯದಾಗಿ, ತಮಗೆ ಹೇಳುವುದು ಏನೆಂದರೆ, ಮಹಾರಾಷ್ಟ್ರದ ಮುಖ್ಯಮಂತ್ರಿಗಳ ವಿಚಾರ ಅದನ್ನು ನಂತರ ನೋಡೋಣ ಅವರು ಯಾರು ಆ ಮಾತು ಹೇಳುವುದಕ್ಕೆ? ಬೆಳಗಾವಿ ನೂರಕ್ಕೆ ನೂರರಷ್ಟು ಕರ್ನಾಟಕದ ಅವಿಭಾಜ್ಯ ಅಂಗ ನಾವೇನು ತಲೆಕೆಡಿಸಿಕೊಳ್ಳಬೇಕಾಗಿಲ್ಲ ಮಾನ್ಯ ಯಡಿಯೂರಪ್ಪನವರಿಗೆ ಹಾಗೂ ಮಾನ್ಯ ಈಶ್ವರಪ್ಪನವರಿಗೆ ಏನು ಹೇಳುತ್ತೇನೆಂದರೆ,

ಇವತ್ತಿಗೆ ಐವತ್ತು ದಿವಸವಾಯಿತು ಮಂದಗತಿ ಸರ್ಕಾರ ನಿಧಾನದಲ್ಲಿ ಇದ್ದೀರಿ ಸರ್ಕಾರ ಕರ್ನಾಟಕವನ್ನು ಕಗ್ಗತ್ತಲ್ಲಿನಲ್ಲಿಟ್ಟಿದ್ದೀರಿ ಆದುದರಿಂದ ನಾನು ಇದನ್ನು ಕೇಳುತ್ತೇನೆ ನೀವು ಸುಮ್ಮನೆ ವಕೀಲರ ಜೊತೆಯಲ್ಲಿ ಮಾತನಾಡಿದ್ದೇವೆ, ಸರ್ವಪಕ್ಷಗಳ ನಿಯೋಗ ಎಂದು ಹೇಳುತ್ತೀರಿ, ನೀವು ಸರ್ವ ಪಕ್ಷಗಳ ನಿಯೋಗವನ್ನು ಕರೆದುಕೊಂಡು ಹೋಗಿದ್ದೀರಾ? ನಾವು ಪ್ರಧಾನ ಮಂತ್ರಿಗಳ ಹತ್ತಿರ ಹೋಗುವುದಕ್ಕೆ ಆಗುತ್ತಿರಲಿಲ್ಲವೇ?

ಅಧ್ಯಕ್ಷರು – ನಾಗರಾಜ್‌ರವರೆ ಈಗ ಇದರ ಚರ್ಚೆ ಮಾಡುವುದು ಬೇಡ ಈಗ ನೀವು ಇದನ್ನು ಶೂನ್ಯವೇಳೆಯಲ್ಲಿ ಎತ್ತಿದಿರಿ ದಯಮಾಡಿ ಇಲ್ಲಿ ನೋಡಿ ಶೂನ್ಯವೇಳೆಯಲ್ಲಿ ಕೆಲವು ಮಾನ್ಯ ಸದಸ್ಯರುಗಳು ಮೊದಲು ಯಾರೂ ಇರಲಿಲ್ಲ ಯಾವುದೋ ಗಂಭೀರವಾದ ವಿಷಯವನ್ನು ಶೂನ್ಯವೇಳೆಯಲ್ಲಿ ಎತ್ತುತ್ತಾರೆಂದರೆ ನಾನು ಅವಕಾಶ ಕೊಟ್ಟರೆ ಇಡೀ ದಿವಸ ಈ ರೀತಿ ಆದರೆ ಏನು ಪ್ರಯೋಜನ? ಅಜೆಂಡಾದಲ್ಲಿರುವ ವಿಷಯಗಳು ಚರ್ಚೆಯಾಗುವುದು ಬೇಡವೇ? ಆಯಿತು, ಈಗ ಮುಖ್ಯಮಂತ್ರಿಗಳು ಬರುತ್ತಾರೆ, ಅದಕ್ಕೆ ಅವರೇನು ಹೇಳುತ್ತಾರೆ ನೋಡೋಣ ಆಮೇಲೆ ಅದನ್ನು ತೆಗೆದುಕೋಳ್ಳೋಣ ಬಿಡಿ

ಶ್ರೀ ವಾಟಾಳ್ ನಾಗರಾಜ್ – ಈ ಸರ್ಕಾರದ ಮಂದಗತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) – ಇದು ಕೇವಲ ಪ್ರಚಾರದ ತಂತ್ರ. ಕಾವೇರಿ ವಿಚಾರದಲ್ಲಿ ಯಾವುದೇ ಕಾರಣಕ್ಕೂ ಕೂಡ ರಾಜ್ಯ ಸರ್ಕಾರ ರಾಜಕಾರಣ ಮಾಡುವುದಕ್ಕೆ ನಾವು ತಯಾರಿಲ್ಲ ಈಗಾಗಲೇ ಸರ್ವಪಕ್ಷಗಳ ಅಭಿಪ್ರಾಯ ಇಡೀ ಕರ್ನಾಟಕದ ಅಭಿಪ್ರಾಯದ ಪ್ರಕಾರ ನಾವು ಎರಡೆರಡು ಬಾರಿ ಮೂರು ಮೂರು ಬಾರಿ ಸಭೆ ಕರೆದು ಅವರೆಲ್ಲರ ಅಭಿಪ್ರಾಯಗಳನ್ನು ತೆಗೆದುಕೊಂಡು

ನಾವು ಮುಂದಕ್ಕೆ ಹೋಗುತ್ತಿದ್ದೇವೆ ಕರುಣಾನಿಧಿಯವರು ಒಂದೊಂದು ಸಲ ಒಂದೊಂದು ಹೇಳಿಕೆ ಕೊಡುವುದಕ್ಕೆ ಖಂಡಿತವಾಗಿ ನಾವು ಜವಾಬ್ದಾರರಲ್ಲ ಏಕೆಂದರೆ ತೀರ್ಪು ಬಂದಾಗ ಅವರು ಸ್ವಾಗತ ಮಾಡಿದರು ಅದಾದ ನಂತರ ಜಯಲಲಿತಾರವರು ಹೇಳಿದ ತಕ್ಷಣ ವಿರೋಧಿಸಿದರು ಹೀಗಾಗಿ ಕರುಣಾನಿಧಿಯವರು ಮಾಡುವ ಪ್ರತಿಯೊಂದು ಹೆಜ್ಜೆಗೆ ನಾವು ಅವರ ಜೊತೆಯಲ್ಲಿ ಕುಣಿಯುವುದಕ್ಕಾಗುವುದಿಲ್ಲ ಈ ಪ್ರಶ್ನೆ ಸರ್ವಪಕ್ಷಗಳ ತೀರ್ಮಾನದ ಪ್ರಕಾರವೇ ರಾಜ್ಯ ಸರ್ಕಾರದವರು ಮುಂದೆ ಹೋಗುತ್ತಿದ್ದೇವೆ ಆ ದಿಕ್ಕಿನಲ್ಲಿ ಇಡೀ ಕರ್ನಾಟಕ ರಾಜ್ಯದ ಅಭಿಪ್ರಾಯದ ಪ್ರಕಾರವೇ ಹೋಗುತ್ತಿದ್ದೇವೆಯೇ ಹೊರತು ಯಾವುದೇ ಕಾರಣಕ್ಕೂ ಮಂದಗತಿಯ ಪ್ರಶ್ನೆಯಿಲ್ಲ ಸರ್ವಪಕ್ಷದ ಸಭೆಯಲ್ಲಿ ಚರ್ಚೆಯಾಗುವಂಥ ಸಂದರ್ಭದಲ್ಲಿ ದೆಹಲಿಗೆ ಸರ್ವಪಕ್ಷಗಳ ನಿಯೋಗ ಹೋಗಬೇಕೆನ್ನುವ ಭಾವನೆಯೂ ಕೂಡ ಬರಲಿಲ್ಲ ಪ್ರಶ್ನೆ ಏನೆಂದರೆ, ಈ ರೀತಿಯಾಗಿ ಸುಪ್ರೀಂ ಕೋರ್ಟ್‌ನಲ್ಲಿ ನಮ್ಮ ನ್ಯಾಯವಾದಿಗಳು ಏನು ಹೇಳುತ್ತಾರೆ ಆ ಪ್ರಕಾರವಾದ ಮಾಡಬೇಕೆಂದು ಖಂಡಿತವಾಗಿ ಆ ದಿಕ್ಕಿನಲ್ಲಿ ಇದ್ದೇವೆ ವಕೀಲರು ಹೋಗುತ್ತಾರೆ ಕರ್ನಾಟಕಕ್ಕೆ ಏನು ಅನುಕೂಲ ವಾಗುತ್ತದೆಯೋ ಆ ನಿಟ್ಟಿನಲ್ಲಿ ಖಂಡಿತ ನ್ಯಾಯ ದೊರಕಿಸುವಂಥ ಪ್ರಯತ್ನ ನಡೆಸುತ್ತೇವೆ

ಅಧ್ಯಕ್ಷರು – ಆಯಿತು ಬಿಡಿ ಶ್ರೀರಾಮರೆಡ್ಡಿಯವರು ನೀವು ಕೇಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಗೃಹಸಚಿವರು ಹಾಗೂ ಸಾರಿಗೆ ಸಚಿವರು ಇದ್ದಾರೆ ನಿನ್ನೆ ಮಂಡ್ಯದಲ್ಲಿ ಒಂದು ಘಟನೆಯಾಯಿತು

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ – ಈ ವಿಚಾರ ಮುಗಿಯಲಿ ನಂತರ ನೀವು ಕೇಳಿ

ಅಧ್ಯಕ್ಷರು – ಖರ್ಗೆ ಸಾಹೇಬರೇ,

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ – ಇಲ್ಲ, I have to tell

(ಗೊಂದಲ)

ಅಧ್ಯಕ್ಷರು – ಆಗಲ್ಲ ಶೂನ್ಯವೇಳೆಯಲ್ಲಿ ಅವರು ವಿಚಾರ ಪ್ರಸ್ತಾಪ ಮಾಡಿದರು ತಾವು ಮಾತನಾಡಿದಿರಿ ಇದರ ಬಗ್ಗೆ ಮುಗಿಯಲಿ ಎಂದರೆ ಏನು ಮುಗಿಯುತ್ತದೆ?

ಶ್ರೀ ಎನ್ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು) :– Controversial ಆಗಿ ನಾನು ಹೇಳುವುದಕ್ಕೆ ಹೋಗುವುದಿಲ್ಲ ಮಾನ್ಯ ಪ್ರಕಾಶ್‌ರವರೇ ತಾವು ಇರಲಿಲ್ಲ ಮಾನ್ಯ ಮುಖ್ಯಮಂತ್ರಿಗಳು, ಮೊನ್ನೆ ಯುಗಾದಿ ಹಬ್ಬದ ಶುಭಾಶಯಗಳನ್ನು ಹೇಳುವಂಥ ಕಾಲದಲ್ಲಿ ಕಾವೇರಿ ಬಗ್ಗೆ ಪ್ರಸ್ತಾಪಿಸಿ, ಇದರ ಬಗ್ಗೆ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬೇಕೆನ್ನುವ ವಿಚಾರ ಪತ್ರಿಕೆಯಲ್ಲಿ ಬಂದಿತ್ತು ಅದಕ್ಕೆ ಕರುಣಾನಿಧಿಯವರು ನಾವು ಮಾತನಾಡಲಿಕ್ಕೆ ರೆಡಿಯಿಲ್ಲವೆಂದು ಹೇಳಿದ್ದಾರೆ ಮೊನ್ನೆ ವಾಟಾಳ್ ನಾಗರಾಜ್‌ರವರು ನನ್ನ ಹತ್ತಿರ ಬಂದಿದ್ದರು ಈ ವಿಷಯದ ಬಗ್ಗೆ ಪ್ರಸ್ತಾಪಿಸೋಣವೆಂದರು ಅದಕ್ಕೆ ನಾನು ಹೇಳಿದೆ, ಈ ವಿಷಯದ ಬಗ್ಗೆ ಪುನಃ ಪ್ರಸ್ತಾಪಿಸಿದರೆ ಬಹಳ ದೀರ್ಘಕ್ಕೆ ಹೋಗುತ್ತದೆ ಹೀಗಾಗಿ ಬೇಕಾಗಿಲ್ಲವೆಂದು ಹೇಳಿದೆ ತಾವು ಇವತ್ತು ಶೂನ್ಯವೇಳೆಯಲ್ಲಿ ಅವಕಾಶ ಕೊಟ್ಟಿದ್ದೀರಿ ಮಾನ್ಯ ರಮೇಶ್ ಕುಮಾರ್ ಮತ್ತು ನಾವು ಹೇಳುವ ಮಾತು ಏನೆಂದರೆ, ತಮಿಳುನಾಡಿನ ಮುಖ್ಯಮಂತ್ರಿಗಳು ಹೇಳುವ ಮಾತು ಕೇವಲ ಕುಮಾರ ಸ್ವಾಮಿಯವರಿಗಲ್ಲ ಇಡೀ ರಾಜ್ಯದ ಜನತೆಗೆ ಇಡೀ ಕರ್ನಾಟಕದಲ್ಲಿ ಇದರ ಬಗ್ಗೆ ಒಗ್ಗಟ್ಟಾಗಿ ಪ್ರತಿಭಟನೆಗಳು ಆಗುತ್ತಿವೆ ಮಾತನಾಡತಕ್ಕಂಥ ಕಾಲದಲ್ಲಿ ಕರುಣಾನಿಧಿಯವರು ಹೇಳತಕ್ಕಂಥದ್ದು ಸರಿಯಲ್ಲವೆಂದು ಅವರು ಹೇಳಿದರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಿಕ್ಕೆ ನಾವು ತಯಾರಿರಲಿಲ್ಲ ಕೊನೆಗೆ ಶ್ರೀರಾಮರೆಡ್ಡಿಯವರು ವಾಟಾಳ್ ನಾಗರಾಜ್‌ರವರು ಹೇಳಿದಾಗ ಮಾತನಾಡಿದೆವು ನಾನು ಏನು ಹೇಳಿದೆ, ಈ ರೀತಿಯಾಗಿ ಹೇಳಿಕೆ ಕೊಟ್ಟಿರುವುದು ಸರಿಯಲ್ಲ, ಅವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ ಅವರ ಮೇಲೆ ಹೇಳಿದರೂ ನಮ್ಮ ರಾಜ್ಯದ ಘನತೆ ಗೌರವ ಇದರಲ್ಲಿ ಇದೆ ಒಟ್ಟಾರೆಯಾಗಿ ನಮ್ಮ ಇಡೀ ರಾಜ್ಯದ ಜನತೆ ಇದರ ಬಗ್ಗೆ ಒಂದಾಗಿ ಪ್ರತಿಭಟನೆ ಮಾಡುತ್ತಿದ್ದಾರೆ

ಇವತ್ತು ಬಹಳ ಜನ ಎಲ್ಲಾ ಎದ್ದು ನಿಂತುಬಿಟ್ಟರು ಮಾನ್ಯ ಚೆಲುವರಾಯಸ್ವಾಮಿಯವರು ಈ ಕಡೆಗೆ ಬನ್ನಿ ಎಂದು ಹೇಳಿದರು ತಮಗೆ ಗೊತ್ತಿದೆಯೋ ಇಲ್ಲವೋ ಒಂದು ಸಲ ಏನಾಯಿತು ಎಂದರೆ, ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಯಾಗಿ ಅಲ್ಲಿ ಕುಳಿತಿದ್ದರು

(ಗೊಂದಲ)

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) – ದಯಮಾಡಿ ಅವರು ತಮ್ಮ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು ಅವರು ಏನು ಅಂದರು, ನಾನೇನು ಹೇಳಿದೆ, ಎಂಬುದನ್ನು ರೆಕಾರ್ಡ್ ತೆಗೆಸಿ ನೋಡಿಬಿಡಲಿ ತೆಗೆಸಿ ನೋಡಿ ನಮ್ಮದು ತಪ್ಪಾಗಿದ್ದರೆ, ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದರಲ್ಲಾ, ಅವರಷ್ಟು ಅನುಭವ ನಮಗೆ ಇಲ್ಲ ನಾವು ಬಹಳ ಚಿಕ್ಕವರಿದ್ದೇವೆ ತಾವು ಕೂಡ ಬಹಳಷ್ಟು ಸಲ ಅಂದರೆ ಎಂಟು ಬಾರಿ ಆಯ್ಕೆಯಾಗಿ ಬಂದಿದ್ದೀರಿ ನಿಮಗೆ ತಾಕತ್ತು ಇದ್ದರೆ ಎನ್ನುವ ಪದವನ್ನು ಅವರು ಉಪಯೋಗಿಸಿದ್ದಾರೋ ನಾನು ಉಪಯೋಗಿಸಿದ್ದೇನೋ ಎಂದು ತೆಗಿಸಿ ನೋಡಲಿ

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ – ನಾವು ಹೇಳಬೇಕಾಗುತ್ತದೆ

(ಗೊಂದಲ)

ಶ್ರೀ ಎನ್ ಚೆಲುವರಾಯಸ್ವಾಮಿ – ಆಮೇಲೆ 150 ಕೋಟಿ ರೂಪಾಯಿಗಳ ಹಗರಣವನ್ನು ಎಷ್ಟು ಸಾರಿ ಸದನದಲ್ಲಿ ಎತ್ತಬೇಕು? ಮಾನ್ಯ ಅಧ್ಯಕ್ಷರೆ, ತಮಗೂ ಸಹ ಈ ಸಭೆಯನ್ನು ನಿಯಂತ್ರಣ ಮಾಡುವ ಅಧಿಕಾರವಿದೆ 150 ಕೋಟಿ ರೂಪಾಯಿಯ ಹಗರಣವನ್ನು ಇವರು prove ಮಾಡಲಿ ತಾಕತ್ತು ಇದ್ದರೆ prove ಮಾಡಿ ಎಂದು ಹೇಳಿದೆ ಆ ಸದನದಲ್ಲಿಯಾಗಲಿ ಈ ಸದನದಲ್ಲಾಗಲಿ ಎಷ್ಟು ಸಾರಿ ಈ ವಿಷಯ ಎತ್ತುತ್ತಾರೆ? ಎಷ್ಟು ಬಾರಿ ಈ ಸದನದಲ್ಲಿ ಎತ್ತುವುದಕ್ಕೆ ಅವಕಾಶ ಇದೆ? ಅದೇನು ತಮಾಷೆಯೇ? ಅವರೊಬ್ಬರು ಮಾಜಿ ಮುಖ್ಯಮಂತ್ರಿ

ಯಾಗಿರತಕ್ಕಂಧವರು ಎಂಟು ಬಾರಿ ಈ ಸದನಕ್ಕೆ ಬಂದಿರತಕ್ಕಂಧವರು ಹಗರಣ, ಹಗರಣ, ಎಂದರೆ ಏನು ಹಗರಣ?

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ – ನೀವು ಹೇಳಬೇಕು ಅದನ್ನು ನಾವು ಹೇಳಲ್ಲ

ಶ್ರೀ ಎನ್ ಚೆಲುವರಾಯಸ್ವಾಮಿ – ಹೌಸ್‌ನ ಮುಂದೆ ಅವರು ಹಗರಣವನ್ನು prove ಮಾಡಲಿ, ಅದು ಬಿಟ್ಟು ಅವರು ಈ ರೀತಿಯಾಗಿ ಮಧ್ಯದಲ್ಲಿ ಮಾತನಾಡುವುದನ್ನು ಮೊದಲು ನಿಲ್ಲಿಸಬೇಕು

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ – ಯಾರು ಮುಖ್ಯಮಂತ್ರಿಗಳ ಮೇಲೆ ಅಪಾದನೆ ಮಾಡುತ್ತಾರೆ,? ವಸಂತ ಬಂಗೇರರವರು ನಿನ್ನೆ ಪದೇ ಪದೇ ಹೇಳಿದ್ದಾರೆ

(ಗೊಂದಲ)

ಶ್ರೀ ಎನ್ ಚೆಲುವರಾಯಸ್ವಾಮಿ – ಪಕ್ಷದ ವಿಚಾರ ಬೇಡ ಪಕ್ಷದಲ್ಲಿರತಕ್ಕಂಧ ಸಮಸ್ಯೆ ಬಗ್ಗೆ ಚರ್ಚೆ ಮಾಡಲಿಕ್ಕಲ್ಲ ಈ ವೇದಿಕೆ ಇರುವುದು ಜನರ ಸಮಸ್ಯೆಗಳ ಬಗ್ಗೆ ಸರ್ಕಾರ ಪಾಲಿಸಿ ಬಗ್ಗೆ ಚರ್ಚೆ ಮಾಡುವುದಕ್ಕೆ ವಿರೋಧ ಪಕ್ಷದ ನಾಯಕರು ಇರುವುದು

(ಗೊಂದಲ)

ಅಧ್ಯಕ್ಷರು – ಇಲ್ಲಿಗೆ ಅದನ್ನು ಮುಕ್ತಾಯ ಮಾಡೋಣ

(ಗೊಂದಲ)

ಶ್ರೀ ಎನ್ ಚೆಲುವರಾಯಸ್ವಾಮಿ – ಪಕ್ಷದ ಚಟುವಟಿಕೆಗಳನ್ನು, ಚರ್ಚೆಗಳನ್ನು ಈ ಸದನ ಉಪಯೋಗಿಸಿಕೊಳ್ಳತಕ್ಕಂಧದ್ದಕ್ಕೆ ಅವಕಾಶವಿಲ್ಲ ವಿರೋಧ ಪಕ್ಷದ ನಾಯಕರು ಸರಕಾರದ ಬಗ್ಗೆ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದ ನೀತಿ ನಿಯಮಗಳ ಬಗ್ಗೆ ಮಾತನಾಡಲಿ ನಮ್ಮ ಪಕ್ಷದಲ್ಲಿ ಏನಾಗುತ್ತಿದೆಂದು

ಹೇಳತಕ್ಕಂಥದ್ದಲ್ಲ ಇವರ ಪಕ್ಷ ಏನಾಗಿದೆ ಎಂಬುದನ್ನು ತೆಗೆದು ನೋಡಲಿ ನಮ್ಮ ಪಕ್ಷದ ಬಗ್ಗೆ ಮಾತನಾಡತಕ್ಕಂಥದ್ದು ಬೇಡ ದಯಮಾಡಿ ನಾನು ಮತ್ತೊಮ್ಮೆ ಹೇಳುತ್ತೇನೆ, ಹಗರಣದ ಬಗ್ಗೆ ಮಾತನಾಡಿದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ ಹಗರಣದ ಬಗ್ಗೆ prove ಮಾಡಲಿ, ಯಾವ ಚರ್ಚೆಗೂ ಮತ್ತು ಯಾವ punishmentಗೂ ತಯಾರಿದ್ದೇವೆ ಅನಾವಶ್ಯಕವಾಗಿ ಪದೇ ಪದೇ ಇಂಥ ಹಿರಿಯರು ಮಾಜಿ ಮುಖ್ಯಮಂತ್ರಿಗಳು ಎತ್ತತಕ್ಕಂಥದ್ದು ಗೌರವವಲ್ಲ ಇದನ್ನು ನಿಲ್ಲಿಸಬೇಕೆಂಬುದು ತಮ್ಮ ಮೂಲಕ ನನ್ನ ಬೇಡಿಕೆ

ಶ್ರೀ ಎನ್ ಧರ್ಮಸಿಂಗ್ – ಮಾನ್ಯ ಚೆಲುವರಾಯಸ್ವಾಮಿಯವರ ಕೆಲವು ಮಾತುಗಳು ನಾನು ಒಪ್ಪುತ್ತೇನೆ ಸಾರ್ವಜನಿಕರಿಗೆ ಹೇಳತಕ್ಕಂಥ ಕೆಲಸ ಬಿಟ್ಟರೆ ಬೇರೆ ಕೆಲಸ ನಮಗೇನಿದೆ? ಸಾರ್ವಜನಿಕವಾಗಿ ಸರ್ಕಾರದ ಮೇಲೆ ನೇರವಾಗಿ ಅಪಾದನೆ ಮಾಡಿದ್ದರಿಂದ ಆ ವಿಚಾರ ಪ್ರಸ್ತಾಪ ಮಾಡಬೇಕಾಗುತ್ತದೆ ಆ ಭಾಗದಲ್ಲಿ ಸಾರ್ವಜನಿಕವಾಗಿ ಹೇಳಿಕೆಕೊಟ್ಟ ಮೇಲೆ ನಾವು ಪ್ರಸ್ತಾಪ ಮಾಡುತ್ತೇವೆ ಇಲ್ಲವೆಂದು ತಾವು ಹೇಳಿ ಅದು ಬೇರೆ ಏಕೆಂದರೆ, ಸಾರ್ವಜನಿಕರ ಮನಸ್ಸಿನಲ್ಲಿರತಕ್ಕಂಥ ಭಾವನೆಗಳನ್ನು ವಿರೋಧ ಪಕ್ಷದಲ್ಲಿ ಕುಳಿತು ಪ್ರತಿಬಿಂಬಿಸತಕ್ಕಂಥ ಕೆಲಸವಿದೆ ಆ ಕೆಲಸ ನಾವು ಮಾಡುತ್ತೇವೆ

ಶ್ರೀ ಎಂ ಪಿ ಪ್ರಕಾಶ್ – ಶೂನ್ಯವೇಳೆಯಲ್ಲಿ ಅದಕ್ಕೊಂದು ಮಿತಿಯಿದೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಬಹುದೇ ವಿನಾಃ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ಮಹತ್ವವಾಗಿರತಕ್ಕಂಥ ವಿಷಯಕ್ಕೆ ಬೇರೊಂದು ನಿಯಮಾವಳಿಗಳಲ್ಲಿ ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲದ್ದರಿಂದ ತಾವು ಶೂನ್ಯ ವೇಳೆ ಎಂದು ನಿಗದಿ ಮಾಡಿ ಅದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ ಈ ವಿಷಯದಲ್ಲಿ ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ್ದಾರೆ ಕಡತ ತರಿಸಿದ ಮೇಲೆ ನೋಡೋಣ ವಿಚಾರಗಳನ್ನು ದೀರ್ಘಕ್ಕೆ ತೆಗೆದುಕೊಂಡು ಹೋಗಬೇಕಾಗಿದ್ದಿಲ್ಲ ಸದನದಲ್ಲಿ ಮಾತನಾಡುವಂಥ ಸಂದರ್ಭದಲ್ಲಿ ಒಂದು ಮಾತನ್ನು ಹೆಚ್ಚು ಬಳಸಿರುತ್ತೇವೆ ಒಂದು ಮಾತನ್ನು ಕಡಿಮೆ ಬಳಸಿರುತ್ತೇವೆ, ಅದರ ಬಗ್ಗೆ ನಿರ್ಣಯ ಮಾಡೋಣ ಆ ಸಂದರ್ಭದಲ್ಲಿ ನಾನು ಇಲ್ಲಿ ಇರಲಿಲ್ಲ 150 ಕೋಟಿ ರೂಪಾಯಿಯ ಹಗರಣ ಎನ್ನತಕ್ಕಂಥದ್ದು ಏನಾದರೂ

ಇದ್ದರೆ ಅದರ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತ್ಯಾರೋ ಇತರ ಗೌರವಾನ್ವಿತ ಸದಸ್ಯರಿಗೆ ಇದ್ದರೆ ಅದನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಬರಲಿಕ್ಕೂ ಇದೆ ಅದಕ್ಕಾಗಿ ಬೇರೆ ಬೇರೆ ನಿಯಮಾವಳಿಗಳು ಇವೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿರುವುದು ಕಾವೇರಿ ವಿವಾದಕ್ಕೆ ಮಾನ್ಯ ಕರುಣಾನಿಧಿಯವರು ಕೊಟ್ಟಿರತಕ್ಕಂಥ ಹೇಳಿಕೆಯ ವಿಚಾರದ ಪ್ರಸ್ತಾಪದಲ್ಲಿ, 150 ಕೋಟಿಯ ಪ್ರಕರಣ ಬರುವುದಿಲ್ಲ ಪದೇ ಪದೇ ಒಂದು ಮಾತನ್ನು ಹೇಳುವುದರಿಂದ ಅದು ಒಗಟು ತಂತ್ರಗಾರಿಕೆಯಾಗುತ್ತದೆ ಒಂದು ಸುಳ್ಳನ್ನು ಹತ್ತು ಬಾರಿ ಹೇಳಿದರೆ ಅದು ನಿಜವಾಗಿ ಬಿಡಬಹುದು ಎನ್ನುವಂಥ ಭ್ರಮೆಗೆ ನಾವು ಒಳಗಾಗಿರುತ್ತೇವೆ ಆದರೆ, ಸುಳ್ಳು ಸುಳ್ಳೆ, ಸತ್ಯ ಸತ್ಯವಾಗಿರುತ್ತದೆ ಇಲ್ಲಿ ವಸಂತ ಬಂಗೇರರವರ ವಿಚಾರ ಪ್ರಸ್ತಾಪಿಸತಕ್ಕಂಥ ಅಗತ್ಯವಿರಲಿಲ್ಲ ಒಂದು ವೇಳೆ ವಸಂತ ಬಂಗೇರರವರ ಸುದ್ದಿಯನ್ನು ಪ್ರಸ್ತಾಪಿಸಿದರೆ, ಪಾರ್ಲಿಮೆಂಟ್‌ನಲ್ಲಿ ನಟವರ್‌ಸಿಂಗ್‌ರವರ ಹೇಳಿಕೆಯ ಬಗ್ಗೆ ನೀವು ಏನು ನಿಲುವು ತೆಗೆದುಕೊಂಡಿದ್ದೀರಿ ಎಂದು ನಾವು ಕೇಳಬಹುದಲ್ಲ? ಅಲ್ಲಿ ಈ ವಿಚಾರದಲ್ಲಿ ಪ್ರಧಾನ ಮಂತ್ರಿಗಳು ನಟವರ್‌ಸಿಂಗ್‌ರ ವಿಷಯದಲ್ಲಿ ಏಕೆ ಹೇಳಲಿಲ್ಲ ?

ಶ್ರೀ ಎನ್ ಧರ್ಮಸಿಂಗ್ – ಅಲ್ಲಿನ ಮಾತು ಇಲ್ಲಿ ಏಕೆ ಹೇಳುತ್ತೀರಿ?

ಶ್ರೀ ಎಂ ಪಿ ಪ್ರಕಾಶ್ – ಅದನ್ನೇ ಹೇಳಿದ್ದು ಒಬ್ಬರಿಗೆ ಒಂದು ತತ್ವವನ್ನು ಅನ್ವಯಿಸಲಿಕ್ಕೆ ಪ್ರಯೋಗ ಮಾಡಿದರೆ ಮತ್ತೊಂದು ತತ್ವ ಮತ್ತೊಂದು ಕಡೆಗೆ ಬರುತ್ತದೆ ಗೋಡೆಗೆ ಚೆಂಡನ್ನು ಒಗೆದರೆ ಆ ಚೆಂಡು ವಾಪಸ್ ಬರುತ್ತದೆ ಆದುದರಿಂದ ಇಂಥ ವಿಚಾರಗಳಿಗೆ ನಿಯಮಾವಳಿಯ ಪ್ರಕಾರ ಪ್ರಯತ್ನ ಮಾಡಬೇಕಾಗುತ್ತದೆ ಆದುದರಿಂದ ಅದನ್ನು ಇಲ್ಲಿಗೆ ಮುಕ್ತಾಯ ಮಾಡುವುದು ಒಳ್ಳೆಯದು

ಶ್ರೀ ಕೆ ಆರ್ ರಮೇಶ್‌ಕುಮಾರ್ – ತಮಗೆ ಗೊತ್ತಿದೆ, ಬೆಂಜಮಿನ್ ಡಿಸ್ರೇಲಿ ಅವರು Prime Minister ಅವರನ್ನು ಕುರಿತು ಹೇಳುತ್ತಾರೆ "If I happen to know the Prime Minister of Great Britain, drowned himself into Themes, I will call it a tragedy" ಮತ್ತೆ ಮುಂದುವರಿಸಿ ಹೇಳುತ್ತಾರೆ, " Subsequently, if I learn that he survived, I will call it

a disaster" What is that ? just see, ನೀವು ಹೇಳಿದಂತೆ ನಟವರ್‌ಸಿಂಗ್ ಬಗ್ಗೆ ಕೇಳಿದರೆ ಅದಕ್ಕೊಬ್ಬರು ಅಲ್ಲಿ reply ಕೊಡಬೇಕು ಇಲ್ಲಿ ನನಗೊಬ್ಬರು ರಿಪ್ಲೈ ಕೊಡಬೇಕು See, wit, repartee, give and take,that should become a part of the Legislative proceedings If it loses the borderline of decency,

ಶ್ರೀ ಎಂ ಪಿ ಪ್ರಕಾಶ್ – I agree with that ಈಗ ತಾವು ಹೇಳಿದ್ದನ್ನು ಇದು ಬಹಳ ಚಟುವಟಿಕೆಯಿಂದ ಕ್ರಿಯಾತ್ಮಕವಾಗಿ ನಡೆಯಬೇಕಾದಾಗ ಇವೆಲ್ಲಾ ಅಗತ್ಯವಿರುತ್ತದೆ ಇಲ್ಲವೆಂದಲ್ಲ ಆದರೆ, ಸಮಯ ಸಂದರ್ಭಗಳು ಕೂಡ ಬಹಳ ಮುಖ್ಯ ಕಾವೇರಿ ವಿವಾದದಲ್ಲಿ ಇದ್ಯಾವುದನ್ನೋ ತಂದು ಇಡುವುದು, ವಸಂತ ಬಂಗೇರ ಅವರದ್ದು ಒಂದು ಅವರು ಮೂರುವರೆ ಕೋಟಿ ಕೊಟ್ಟರು ಎಂದು ಯಾವುದೋ ಹೇಳಿದ್ದನ್ನು ತರುವುದು ಅದು ಸದಭಿರುಚಿಯಲ್ಲ ಆ ಸಂದರ್ಭಕ್ಕೆ ಅದನ್ನು ಸರಿಯಾಗಿ ಉಪಯೋಗಿಸಿದಾಗ ಸರಿಯಾಗುತ್ತದೆ

ಶ್ರೀ ಎನ್ ಧರ್ಮಸಿಂಗ್ – ಆ ಸಂದರ್ಭದಲ್ಲಿ ತಾವು ಇರಲಿಲ್ಲ ತಾವು ಇದ್ದರೆ ಇದು ಆಗುತ್ತಿರಲಿಲ್ಲ

ಶ್ರೀ ಎಂ ಪಿ ಪ್ರಕಾಶ್ – ಶೂನ್ಯವೇಳೆಯಲ್ಲಿ ಅದನ್ನು ತರಲಿಕ್ಕೆ ಬರುವುದಿಲ್ಲ ಏಕೆಂದರೆ ನಿಮ್ಮ ಹತ್ತಿರ ಎಷ್ಟು canon power ಇದೆಯೋ ನಮ್ಮ ಹತ್ತಿರನೂ ಇದೆ ಏಕೆಂದರೆ, ಈ ಐವತ್ತು ವರ್ಷದಲ್ಲಿ ತಪ್ಪುಗಳನ್ನು ಮಾಡಿಕೊಂಡು ಬಂದಿರುವುದರಿಂದ, ನಾವೆಲ್ಲರೂ ತಪ್ಪಿತಸ್ಥರು ಒಬ್ಬರು ಈಗ ತಪ್ಪು ಮಾಡಿರಬಹುದು ಇನ್ನೊಬ್ಬರು ನಂತರ ಮಾಡಿರಬಹುದು ಆದುದರಿಂದ, ಇದು disaster

(ಆ) ವಿಷಯ :– ಮಂಡ್ಯ ಜಿಲ್ಲೆಯ ಡಿ ಸಿ ಕಛೇರಿ ಮುಂದೆ ನಡೆದಿರುವ ಘಟನೆ ಬಗ್ಗೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) – ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ಮಾಡುತ್ತಿದ್ದಂಥ ಮಹಿಳೆಯರು ಮತ್ತು ಕೃಷಿ ಕಾರ್ಮಿಕರ ಮೇಲೆ ಪೊಲೀಸ್‌ನವರು ಲಾರಿ ಚಾರ್ಜ್